ವಾರಪತ್ರಿಕೆ
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 37 ಸೆಪ್ಟೆಂಬರ್ 13, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರೈತ ಚಳುವಳಿಯ ಇತಿಹಾಸದಲ್ಲೊಂದು ಅಪೂರ್ವ ಕ್ಷಣ

ಕರ್ನಾಟಕಾದ್ಯಂತ ಹತ್ತಾರು ಸಾವಿರ ರೈತರು ಜೈಲು ಕಂಡ ಚಳುವಳಿ

ದೇಶ ಭೀಕರ ಬರಗಾಲವನ್ನೆದುರಿಸುತ್ತಿರುವ ಈ ಕ್ಷಣದಲ್ಲಿ ಲಕ್ಷ ಲಕ್ಷ ರೈತರು ಇಂದು ಪ. ಬಂಗಾಳದಲ್ಲಿ, ಕೇರಳದಲ್ಲಿ, ಆಂಧ್ರ ಪ್ರದೇಶದಲ್ಲಿ, ತಮಿಳುನಾಡಿನಲ್ಲಿ ಹಿಂದಿ ಭಾಷೆಯ ಪ್ರದೇಶಗಳಲ್ಲಿ ಉಗ್ರ ಗ್ರಾಮಿಗಳ ನಿರಂತರ ಬೆದರಿಕೆಯನ್ನೆದುರಿಸಿಯೂಬಂಧನಕ್ಕೊಳಗಾಗುತ್ತಿರುವ ಪಂಜಾಬಿನ ಧೀರ ರೈತರು ಇವರೆಲ್ಲರ ಜೊತೆ ಹೆಗಲಿಗೆ ಹೆಗಲು ಕೊಟ್ಟು ಬಂಧನಕ್ಕೊಳಗಾಗುತ್ತಿದ್ದಾರೆ. ಕರ್ನಾಟಕದ ರೈತ ಸಮೂದಾಯದ ಮುಂಚೂಣಿಯಲ್ಲಿರುವ ರೈತರು. "ಭೂಮಿ, ಬೆಲೆ, ಕೂಲಿ, ನೀಡಿ, ಕರ ಭಾರ ತೊಲಗಿಸಿ" 'ಎಂಬ ಕೇಂದ್ರ ಘೋಷಣೆಯೊಡನೆ, ಬರಗಾಲವನ್ನು ತೊಲಗಿಸಿ ಎಂಬ ನಿನಾದದೊಡನೆ ಹೋರಾಟದ ಹೆಜ್ಜೆ ಹಾಕುತ್ತಿರುವ ರೈತರು ಕರ್ನಾಟಕದಲ್ಲಿ ಒಂದು ಎರಡು ಸ್ಥಳಗಳಲ್ಲಲ್ಲ. ನೂರಾರು ಸ್ಥಳಗಳಲ್ಲಿ ಒಂದೇ ಕ್ಷಣದಲ್ಲಿ ಒಂದು ದಿನವಲ್ಲ ಎರಡು ದಿನವಲ್ಲ ಒಂದು ವಾರಕಾಲ ಬಂಧನದ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಎಲ್ಲಾ ಕಡೆಯಿಂದ ಪತ್ರಗಳು ತಂತಿವಾರ್ತೆಗಳು ಹೊಸ ಹೊಸ ಪ್ರದೇಶದಲ್ಲಿಯೂ ಬಂಧನಕ್ಕೊಳಗಾದ ಸುದ್ದಿಯನ್ನು ಹೊತ್ತು ತರುತ್ತಿವೆ.

ಸರಿ ಸುಮಾರು ಒಂದು ವರ್ಷದ ಹಿಂದೆ 'ವಿಧಾನ ಸೌಧ ಚಲೋ' ಎಂದು ಬೆಂಗಳೂರಿನ ಕಲ್ಲು ಕಟ್ಟಡದ ಮುಂದೆ ನೆರೆದಿದ್ದ 50,000 ರೈತಸ್ತೋಮ್ ಇಡೀ ರಾಜ್ಯದ ಚಳುವಳಿಗೊಂದು ತಿರುವು ನೀಡಿತು. ಕರ್ನಾಟಕ ರಾಜ್ಯದಲ್ಲಿ ವಕ್ಕಲಿಗರು, ಲಿಂಗಾಯಿತರು, ಹಿಂದುಳಿದ ಜಾತಿಯವರು ಎಂದು ಮೀಸಲಾತಿಗಾಗಿ ಗುದ್ದಾಡುತ್ತಾ ಹರಿ ಹಂಚಿ

> ಬೇರೆ ಬೇರೆ ರಾಜ್ಯಗಳಲ್ಲಿ
> ರೈತರು ನಡೆಸುತ್ತಿದ್ಧ
> ಹೋರಾಟಗಳನ್ನು
> ಒಂದೇ ಹುರಿಯಾಗಿ ಹೊಸೆದು
> ಏಕ ಕಾಲಕ್ಕೆ ಕಾಳಗದ
> ಕಣಕ್ಕಿಳಿಸಿದ
> ಸೆಪ್ಟೆಂಬರ್ ಚಳುವಳಿ
> ಭಾರತದ ರೈತಚಳುವಳಿಗೊಂದು
> ಐತಿಹಾಸಿಕ ತಿರುವು ನೀಡಲಿದೆ.

ಹೋಗುತ್ತಿದ್ದ ರೈತರನ್ನು ಒಂದು ಮಾಡಿತ್ತು. ಎಲ್ಲಾ ಜಾತಿಯ ರೈತರನ್ನೂ ಬಾಧಿಸುವ ಬೇಡಿಕೆಗಳಿಗಾಗಿ ಧ್ವನಿಯೆತ್ತಿತ್ತು. ಕರ್ನಾಟಕ ಪ್ರಾಂತ ರೈತ ಸಂಘ 'ಬಂಜರುಭೂಮಿ ಬಡವರಿಗಂಚಿ' ಎಂದು ಎಬ್ಬಿಸಿದ ಸ್ವರ ಇಂದು ಜನತಾ ಸರ್ಕಾರವನ್ನು ಬಂಜರು ಭೂಮಿ ಬಗ್ಗೆ ಕಾನೂನು ತರಲು ಒತ್ತಾಯ ಹೇರುತ್ತಿದೆ. ಕೃಷಿ ಕೂಲಿಗಾರರ ಕೂಲಿಯನ್ನೇರಿಸಲು ಒಪ್ಪುವಂತೆ ಮಾಡಿದೆ.ಆದರೆ ಜನತಾ ಸರ್ಕಾರ ಈ ಕ್ರಮಗಳನ್ನು ಸರಿಯಾಗಿ ರೂಪಿಸಲು ಮತ್ತು ಸರಿಯಾಗಿ ಜಾರಿಗೆ ತರಲು, ರೈತ ಸಮುದಾಯ ಒತ್ತಾಯ ಹೇರ ಬೇಕಾಗಿದೆ. ದಿನಂಪ್ರತಿ ಜನತಾ ಸರ್ಕಾರ ಸ್ವತಃ ಕೈಗೊಳ್ಳುತ್ತಿರುವ ಹಾಗೂ ಕೇಂದ್ರ ಸರಕಾರದ ಇಚ್ಛೆಗೆ ಮಣಿದು ಹೇರುತ್ತಿರುವ ಕರಭಾರಗಳನ್ನು,ರೈತ ವಿರೋಧಿ ಕ್ರಮಗಳನ್ನು ವಿರೋಧಿಸಲು ನಿರಂತರ ಹೋರಾಟ ಮಾಡಬೇಕಾಗಿದೆ. ರೈತರೆಲ್ಲರ ಜೀವ ಜೀವಾಳವನ್ನು ತನ್ನ ಕಪಿ ಮುಷ್ಟಿಯಲ್ಲಿಟ್ಟುಕೊಂಡು ಕುಣಿಸುತ್ತಿರುವ, ರೈತ ವಿರೋಧಿ, ಜನ ವಿರೋಧಿ ಗುತ್ತೇದಾರಿ ಬಂಡವಾಳಶಾಹಿಗಳ, ಬಡ್ಡಿ ಸಾಹುಕಾರ, ಭೂಮಾಲಕರ ಕೈಗೊಂಬೆಯಾದ ಕೇಂದ್ರ ಸರ್ಕಾರದ ವಿರುದ್ಧ ಸೆ. 11 ರಂದು 'ರಾಜಭವನ್ ಚಲೋ' ನಡೆಯಿತು. ಈ ರಾಜಭವನವನ್ನು, ಕೇಂದ್ರ ಸರ್ಕಾರದ ಕಛೇರಿಗಳನ್ನು, ರಾಜ್ಯ ಸರ್ಕಾರದ ಕಛೇರಿಗಳನ್ನು ಪಿಕೆಟಿಂಗ್ ನಡೆಸಿದ್ದಾರೆ. ಇಂದು ರೈತ ಸಮುದಾಯದ ಮುಂಚೂಣಿಯ ರೈತರು ಬಂಧನಕ್ಕೊಳಗಾಗುತ್ತಿದ್ದರೆ. ನಾಳೆ ಇಡೀ ರೈತ ಸಮುದಾಯ ಮುತ್ತಿಗೆ ಹಾಕಲಿದೆ.

ಈ ರೈತ ಹೋರಾಟಕ್ಕೆ ಜನರ ಪ್ರಜಾಸತ್ತಾತ್ಮಕ ವಿಭಾಗಗಳೆಲ್ಲರ ಬೆಂಬಲ ಸಾರಿದೆ. ರೈತರ, ಎಲ್ಲಾ ದುಡಿಯುವ ಜನರ ನಾಯಕನಾದ ಕಾರ್ಮಿಕ ವರ್ಗದ ದೃಢ ಬೆಂಬಲ ಎಲ್ಲ ಕಡೆ ಅತ್ಯ ಪೂರ್ವ ಪ್ರಮಾಣದಲ್ಲಿ ಕಂಡು ಬಂದಿದೆ.

ಬೆಂಗಳೂರು

ದಿನಾಂಕ 11ರಂದು ಸಹಸ್ರಾರು ಕಾರ್ಮಿಕರು ಅವರ ಜೊತೆಗೆ ದುಡಿಯುವ ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು ದೃಢವಾದ ಹೆಜ್ಜೆ ಹಾಕುತ್ತಾ ರಾಜ ಭವನದೆಡೆ ಸಾಗಿದ್ದರು. ಕಾಂ॥ ಸೂರ್ಯನಾರಾಯಣ ರಾವ್‌ಅಖಿಲ ಭಾರತ ಸಿ.ಐ.ಟಿ.ಯು. ಉಪಾಧ್ಯಕ್ಷರು ಹಾಗೂ ಇತರ ಕಾರ್ಮಿಕ ಮುಖಂಡರು, ಪಿ.ಜಗನ್ನಾಥ್ ಕೃಷಿ ಕಾರ್ಮಿಕ ಸಂಘದ ಸಂಚಾಲಕರು ಇವರು ನೇತೃತ್ವ ವಹಿಸಿದ್ದಾರೆ. ರಾಜಭವನ ಇನ್ನೂ ದೂರದಲ್ಲಿರುವಾಗಲೇ ಬಂಧನಕೊಳಗಾಗಿದ್ದಾರೆ.

ದ. ಕ. ಜಿಲ್ಲೆ

ದ. ಕ. ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು, ಹಂಚಿನ ಕಾರ್ಮಿಕು, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರೈತರ ಕೃಷಿ ಕಾರ್ಮಿಕರ ಜೊತೆ ಬಂಧನಕ್ಕೊಳಗಾಗಿದ್ದಾರೆ.

○

ಜೆ. ಎಚ್. ಪಟೇಲರೂ, ರೋಗಗ್ರಸ್ತ ಕಾರ್ಖಾನೆಗಳೂ

– ಸಿ. ನಂಜುಂಡಪ್ಪ

ಸೆಪ್ಟೆಂಬರ್ 4 ರಂದು ಕರ್ನಾಟಕದ ವಿಧಾನಸಭೆಯಲ್ಲಿ ಮಾತನಾಡುತ್ತಾ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವ ಶ್ರೀ ಜೆ.ಎಚ್.ಪಟೇಲರು ರೋಗಗ್ರಸ್ತ ಕೈಗಾರಿಕಾ ಘಟಕಗಳನ್ನು ಸರ್ಕಾರವು ವಹಿಸಿಕೊಳ್ಳುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿ ಬಿಟ್ಟಿದ್ದಾರೆ. ಬಾವಣಗೆರೆಯ ಮೂರು ಜವಳಿ ಗಿರಣಿಗಳಿಗೆ ಸಂಬಂಧಿಸಿ ಮಾತನಾಡುತ್ತಾ ಹೀಗೆ ಹೇಳುವಾಗ ಇದು ಶ್ರೀರಾಮ ಕೃಷ್ಣ ಹೆಗಡೆ ಸರ್ಕಾರದ ಕೈಗಾರಿಕಾ ಧೋರಣೆ ಎಂಬಂತೆ ನುಡಿದಿದ್ದಾರೆ. ಹಾಗೆ ನುಡಿಯುವಾಗ ಸಚಿವರ ಜಿಲ್ಲೆಯಾದ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ಒಂದು ರೋಗಗ್ರಸ್ತ ಘಟಕ ಎಂಬುದು ಅವರ ಮನಃಪಟಲದಲ್ಲಿ ಸುಳಿದಿರಲಿಲ್ಲವೇ? ಸಚಿವರು ಅಷ್ಟೇ ಹೇಳಿ ಬಿಡಲಿಲ್ಲ "ಈ ಗಿರಣಿಗೆ ಆ ಗಿರಣಿಗೆ ಹಣ ಕೊಡಲುಸರ್ಕಾರಕ್ಕೆ ಹೇಗೆ ಸಾಧ್ಯ?" ಎಂದು ಅವರು ಕೇಳಿದ್ದಾರೆ. ಅವರು ಮುಂದುವರೆದು "ಸರ್ಕಾರವು ರೋಗಗ್ರಸ್ತ ಕೈಗಾರಿಕಾ ಘಟಕಗಳ ಗ್ಯಾರೇಜ್ ಅಲ್ಲ" ಎಂದು ಪ್ರಧಾನಮಂತ್ರಿ ರಾಜೀವಗಾಂಧಿಯವರು ಹೇಳಿರುವುದಾಗಿ ನುಡಿದು ನಮ್ಮ ನಿಲುವೆಯನ್ನು ಸಮರ್ಥಿಸಿಕೊಂಡಿದ್ದಾರೆ. ಅಷ್ಟಕ್ಕೇನಿಲ್ಲದೆ ತಮ್ಮ ಅಧಿಕ ಪ್ರಸಂಗ ತನವನ್ನು ಪ್ರಾರಂಭಿಸಿ, ರೋಗಗ್ರಸ್ತ ಕೈಗಾರಿಕಾ ಘಟಕಗಳನ್ನು ಮುಚ್ಚ[illegible]ವುದು ಎಂದು ಸೋವಿಯತ್ ಮುಖಂಡ ಮಿಖಾಯಿಲ್ ಗೋರ್ಬಚೇವ್ ನುಡಿದಿರುವುದಾಗಿ ಹೇಳಿ ಮುಚ್ಚಿದ ಜವಳಿ ಗಿರಣಿಗಳ ಬಗ್ಗೆ ಪ್ರಶ್ನಿಸಿದ ಶಾಸಕರತ್ತ ತಿರುಗಿ ಇದು ಮಾಸ್ಕೊ ಅಥವ ಚೀನ ಅಲ್ಲ ಎಂದಿದ್ದಾರೆ. ಸಚಿವರು, ಇವರು ಕಾರ್ಖಾನೆಗಳು ಮುಚ್ಚುವುದಕ್ಕೆ ಎಲ್ಲದಕ್ಕೂ ಸರ್ಕಾರವೇ ಹೊಣೆ ಎನ್ನುತ್ತಾರೆ, ಎಂದಿದ್ದಾರೆ.

ಕರ್ನಾಟಕದಲ್ಲಿ ರೋಗಗ್ರಸ್ತವಾಗಿ ದು[illegible] ಚಿಕ್ಕ ಕೈಗಾರಿಕಾ ಘಟಕಗಳ ಸಂಖ್ಯೆ 5700ನ್ನು ದಾಟಿದೆ ,ಮೂರು [illegible] ಕುಟುಂಬಗಳು ತಮ್ಮ ಜೀವನ

[8ನೇ ಪುಟ ನೋಡಿ

ಅಪ್ಪಟ ಹೊಣೆಗೇಡಿತನ

(ಪಿ. ಡಿ. ಸಂಪಾದಕೀಯ)

'ಕಾಂಗ್ರೆಸ್ ಸಮಾಜವಾದಿ ವೇದಿಕೆ' ಯನ್ನು ಪುನರುಜ್ಜೀವನಗೊಳಿಸಲು ಕಾಂಗ್ರೆಸ್ ಅಧ್ಯಕ್ಷರಾಗಿರುವ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಅನುಮತಿ ನೀಡಿದ್ದಾರೆ. ಮಾತ್ರವಲ್ಲ ಈ ವೇದಿಕೆಯ ಮೊದಲನೇ ಸಭೆಯಲ್ಲಿ ಸ್ವತಃ ತಾನೇ ಭಾಷಣ ಕೂಡಾ ಮಾಡಿದ್ದಾರೆ. ಸಮಾಜವಾದಿ ವೇದಿಕೆಯನ್ನು ಪುನರುಜ್ಜೀವನ ಗೊಳಿಸದಂತೆ ಹಿರಿಯ ಕಾಂಗ್ರೆಸ್ ಮುಖಂಡ ಮತ್ತು ಸಂಸತ್ತಿನಲ್ಲಿ ಕಾಂಗ್ರೆ ಪಕ್ಷದ ಉಪನಾಯಕರಾಗಿರುವ ಪ್ರೊ.॥ ಎನ್. ಜಿ. ರಂಗಾ ಅವರು ನೀಡಿದ್ದ ಹಿತವಚನವನ್ನು ರಾಜೀವ್ ಗಾಂಧಿ ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ.

ತನ್ನ ಸಂಪುಟದ ಹಿಂದಿನ ಕೆಲವರು ನಂಬಿಗಸ್ಥ ಸಹೋದ್ಯೋಗಿಗಳು ಕಾಂಗ್ರೆಸ್ ಧೋರಣೆಗಳನ್ನು ತಪ್ಪು ತಪ್ಪಾಗಿ ಅನುಷ್ಠಾನಕ್ಕೆ ತಂದಿದ್ದರೆಂದೂ ಅವರು ಕಾಂಗ್ರೆಸಿನ ಮೂಲ ಸಿದ್ಧಾಂತಗಳಿಂದ ಪಕ್ಷವು ವಿಚಲಿತವಾಗುವಂತೆ ಮಾಡಿದ್ದರೆಂದೂ ರಾಜೀವ್‌ಗಾಂಧಿ ಈ ಸಭೆಯಲ್ಲಿ ಆರೋಪಿಸಿರುವುದಾಗಿ 'ದಿ ಟೈಮ್ಸ್ ಆಫ್ ಇಂಡಿಯಾ' (ಆಗಸ್ಟ್ 30) ವರದಿ ಮಾಡಿದೆ. ಮಾಜಿ ಹಣಕಾಸು ಸಚಿವ ವಿ.ಪಿ. ಸಿಂಗ್ ಅವರನ್ನು ಉದ್ದೇಶಿಸಿ ಈ ಆರೋಪಗಳನ್ನು ಮಾಡಲಾಗಿದೆಯೆಂಬುದನ್ನು ಸುಲಭವಾಗಿ ಊಹಿಸಿಕೊಳ್ಳಬಹುದು.

ಪ್ರಧಾನಿಯವರ ಭಾಷಣದಲ್ಲಿ ಅಸ್ಪಷ್ಟವಾಗಿದ್ದ ಈ ಅಪಾದನೆ ಆ ಬಳಿಕ ಕಾಂಗ್ರೆಸ್ ಸಮಾಜವಾದಿ ವೇದಿಕೆ ಹೊರಡಿಸಿದ ಸುದೀರ್ಘವಾದ 'ಆರ್ಥಿಕ ಹೇಳಿಕೆ' ಯಲ್ಲಿ ಅತ್ಯಂತ ಸ್ಪಷ್ಟವಾಗಿಯೇ ಇದೆ. ಪಿ.ಟಿ.ಐ. ವರದಿ ಮಾಡಿರುವ ಈ ಹೇಳಿಕೆಯಪ್ರಕಾರ 'ವಿ ಪಿ ಸಿಂಗ್ ತನ್ನ ದೀರ್ಘಕಾಲೀನ ಹಣಕಾಸು ನೀತಿಗಳ [illegible]ಲಕ ದೇಶದ ಸಂಪನ್ಮೂಲಗಳು ಅಗಾಧವಾಗಿ ಸೋರಿ ಹೋಗುವಂತಹ ಸ್ಥಿತಿಗೆ ಕಾರಣರಾಗಿದ್ದಾರೆಂದೂ ಸಿಂಗ್ ಮತ್ತು ಅವರ ಅನುಚರರು ಅನುಸರಿಸುತ್ತಿದ್ದ ಧೋರಣೆಗಳಿಂದಾಗಿ ಕೊರತೆ ಹಣದ ಸೃಷ್ಟಿ ವಿಪರೀತವಾಗಿ ಬೆಳೆದು ಅದರಿಂದ ಅನೇಕ ದುಷ್ಪರಿಣಾಮಗಳಾಗಿವೆಯೆಂದೂ ಆರೋಪಿಸಲಾಗಿದೆ(ಟೈಮ್ಸ್ ಆಫ್ ಇಂಡಿಯಾ 30.8.87)

(8ನೇ ಪುಟ ನೋಡಿ)

ರಾಜ್ಯಾದ್ಯಂತ ವಿಶ್ವಶಾಂತಿ ದಿನಾಚರಣೆ

ಬೆಂಗಳೂರು

ನಗರದ ಅಲಸೂರು, ಮೈಸೂರು ರಸ್ತೆ, ಚಿಕ್ಕಲಾಲ್‌ಬಾಗ್ ಮತ್ತು ಯಶವಂತಪುರಗಳ ಕೈಗಾರಿಕಾ ಕೇಂದ್ರಗಳಿಂದ ಹೊರಟ ಎರಡು ಸಹಸ್ರ ಮಂದಿ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಕಾರ್ಯಕರ್ತರು ಸಿಲ್ವರ್ ಜ್ಯೂಬ್ಲಿ ಪಾರ್ಕ್‌ಗೆ ಮೆರವಣಿಗೆ ಬಂದು ಬಹಿರಂಗ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ನಾಯಕರಾದ ಕಾ॥ಎನ್.ಕೆ ಉಪಾಧ್ಯಾಯರು ಮಾತನಾಡಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪಾಕಿಸ್ತಾನ ಮತ್ತಿತರ ದೇಶಗಳಿಗೆ ಸರಬರಾಜು ಮಾಡುತ್ತಿರುವ ಆಧುನಿಕ ಯುದ್ಧ ಸಾಮಗ್ರಿಗಳ ಫಲವಾಗಿ ಭಾರತ ರಕ್ಷಣಾ ವೆಚ್ಚವನ್ನು ಹೆಚ್ಚಿಸುವ ಪರಿಸ್ಥಿತಿ ಒದಗಿರುವುದನ್ನು ವಿವರಿಸಿ ಯುದ್ಧ ನಿಂತು ಶಾಂತಿ ನೆಲೆಸಲು ಕಾರ್ಮಿಕ ವರ್ಗ ಸಂಘಟಿತವಾಗಿ ದುಡಿಯಬೇಕೆಂದು ಕರೆ ನೀಡಿದರು. ಅಖಿಲ ಭಾರತ ಶಾಂತಿ ಸೌಹಾರ್ದತಾ ಸಮಿತಿಯ ರಾಜ್ಯ ಅಧ್ಯಕ್ಷರಾದ ಕಾ॥ ಸೇತುರಾವ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎ.ಐ.ಟಿ.ಯು.ಸಿ.ಯ ಬಾಬುಮಾಥ್ಯು ಸಭೆಯನ್ನುದ್ದೇಶಿಸಿ ಮಾತನಾಡಿದರು. ಪ್ರಾರಂಭದಲ್ಲಿ ಕಾ॥ ನಾರಾಯಣರಾವ ಬಾನು ಸ್ವಾಗತಿಸಿ ಕಾ॥ಕೆ.ಎಸ್.ಸುಬ್ರಮಣ್ಯ ವಂದನಾರ್ಪಣೆ ಮಾಡಿದರು.

ಶಿವಮೊಗ್ಗ

ಸಿ.ಐ.ಟಿ.ಯು. ಶಿವಮೊಗ್ಗ ಸಂಘಟನಾ ಸಮಿತಿ ಆಶ್ರಯದಲ್ಲಿ ನೂರಾರು ಮಂದಿ ಕಾರ್ಯಕರ್ತರು ಸೈಕಲ್ ನಡೆಸಿ ನಗರ ಸಭಾ ಆವರಣದಲ್ಲಿ ರ್‍ಯಾಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡರಾದ ಕಾ॥ಎಸ್.ಬಿ.ಶಿವಶಂಕರ್, ತಿರುಕಪ್ಪ ಮುಂತಾದವರು ಮಾತನಾಡಿದರು. ಭಾಷಣಕಾರರು ಅಮೇರಿಕನ್ ಸಾಮ್ರಾಜ್ಯಶಾಹಿಗಳಿಂದ ಮನುಕುಲಕ್ಕೆ ಬಂದಿರುವ ಅಣು ಯುದ್ಧದ ಅಪಾಯ, ವಿಶ್ವಶಾಂತಿ ದಿನಾಚರಣೆ ಮಹತ್ವವನ್ನು ವಿವರಿಸಿದರು.

ಭದ್ರಾವತಿ

ಜಾಗತಿಕ ಕಾರ್ಮಿಕ ಸಂಘಗಳ ಒಕ್ಕೂಟದ ಕರೆಯಂತೆ ಭದ್ರಾವತಿಯ ಜನರಲ್ ಎಂಪ್ಲಾಯಿಸ್ ಮತ್ತು ಹಮಾಲಿ ಕಾರ್ಮಿಕ ಸಂಘ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ಜಂಟಿಯಾಗಿ ಸೈಕಲ್ ರ್‍ಯಾಲಿ ನಡೆಸಿ ಅಮೇರಿಕನ್ ಯುದ್ಧ ಕೋರ ನೀತಿಯನ್ನು ಖಂಡಿಸಿದರು.

ಉಡುಪಿ

ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ.ಯ ನೂರಾರು ಮಂದಿ ಕಾರ್ಯಕರ್ತರು ವಿಶ್ವಶಾಂತಿ ಚಿರಾಯುವಾಗಲಿ ವಿನಾಶದಿಂದ ಮಾನವ ಕುಲ ರಕ್ಷಿಸಿ ಎಂಬ ಘೋಷಣೆ ಕೂಗುತ್ತಾ ನಗರದಲ್ಲಿ ಮೆರವಣಿಗೆ ನಡೆಸಿದರು. ಸಿಂಡಿಕೇಟ್ ಬ್ಯಾಂಕ್ ನೌಕರರ ಮುಂದಾಳು ಕಾ॥ಎಂ.ಆರ್. ಆಚಾರ್ ಅಧ್ಯಕ್ಷತೆ ವಹಿಸಿದ್ದ ಬಹಿರಂಗ ಸಭೆಯನುದ್ದೇಶಿಸಿ ಕಾ॥ಬಿ ರಾಮಕೃಷ್ಣ, ಕಾ॥ಡೇವಿಡ್ ಎ.ಕರ್ಕಡ, ಬಿ. ಉಮಾನಾಥ ಮುಂತಾದವರು ಮಾತನಾಡಿ ಯುದ್ಧ ವಿರೋಧಿ ವಿಶ್ವಶಾಂತಿ ಹೋರಾಟವನ್ನು ಕಾರ್ಮಿಕ ವರ್ಗ ವಿಸ್ತಾರವಾಗಿ ಬೆಳೆಸಿ ಬಲ ಪಡಿಸಲು ಕರೆ ನೀಡಿದರು.

ಬಂಟ್ವಾಳ

ವಿಶ್ವದಾದ್ಯಂತ ಶಾಂತಿಪ್ರಿಯ ಜನತೆಯ ಒಕ್ಕೊರಳಿನ ಧ್ವನಿಯನ್ನು ಧಿಕ್ಕರಿಸಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪರಮಾಣುಯುದ್ಧ ಬಾಹ್ಯಕಾಶಕ್ಕೆ ಕೊಂಡು ಹೋಗುವ ತಾರಾ ಸಮರದ ಯೋಜನೆಯನ್ನು ಮುಂದುವರಿಸುವ ಅಮೇರಿಕನ್ ನೀತಿ ಖಂಡಿಸಿ ಶಾಂತಿಗಾಗಿ ಸಮಾಜವಾದಿ ರಷ್ಯಾದ ನೀತಿಯನ್ನು ಬಂಟ್ವಾಳದಲ್ಲಿ ಸೆಪ್ಟೆಂಬರ್ 1ರಂದು ನಡೆದ ವಿಶ್ವಶಾಂತಿ ದಿನಾಚಾರಣೆಯಲ್ಲಿ ಪ್ರಶಂಸಿಸಲಾಯಿತು. ಸಿ.ಐ.ಟಿ.ಯು.ಎ.ಐ.ಟಿ.ಯು.ಸಿ. ಜಂಟಿಯಾಗಿ ಏರ್ಪಡಿಸಿದ್ದ ಸಭೆಯನ್ನುದ್ದೇಶಿಸಿ ಕಾ॥ ವಾಸು ಗಟ್ಟಿ, ಟಿ, ವಿಶ್ವನಾಥ ನಾಯ್ಕ ಬಿ. ಹೂವಯ್ಯ ಬಂಗೇರ, ಬಿ. ಕೆ. ಕೃಷ್ಣಪ್ಪ, ಆನಂದಹಾಗೂ ಸಂಜೀವ ಬಂಗೇರನವರುಗಳು ಮಾತನಾಡಿದರು.

ಕೆ.ಜಿ.ಎಫ್.

ಸಿ.ಐ.ಟಿ.ಯು. ನೇತೃತ್ವದಲ್ಲಿ ಬಿ.ಜಿ.ಎಂ.ಎಲ್. ಮತ್ತು ಬಿ.ಇ.ಎಂ.ಎಲ್. ಮತ್ತಿತರೇ ಕಾರ್ಮಿಕ ಸಂಘಗಳ ನೂರಾರು ಮಂದಿ ಕಾರ್ಮಿಕರು ಆಂಡರ್ ಸನ್ ಪೇಟೆಯಿಂದ ಮೆರವಣಿಗೆ ನಡೆಸಿದರು. ಈ ಮೆರವಣಿಗೆಯಲ್ಲಿ ನೂರು ಮಂದಿ ಹೈಸ್ಕೂಲ್ ವಿದ್ಯಾರ್ಥಿಗಳು ಬಿಳಿ ಸಮವಸ್ತ್ರ ಧರಿಸಿ ಹಾಗೂ ಮಹಿಳೆಯರು ತಮ್ಮ ಪುಟ್ಟ ಕೂಸುಗಳೊಂದಿಗೆ ಶಾಂತಿ ಮೆರವಣಿಗೆಯಲ್ಲಿ ಭಾಗವಹಿಸಿದರು.

ರಾಬರ್ಟ್‌ಸನ್ ಪೇಟೆಯ ಕಿಂಗ್ ಜಾರ್ಜ್‌ಹಾಲ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ॥ ಜಯರಾಮ್, ಟಿ.ಎಸ್. ಮಣಿ, ಕಾ. ಸವರಿದಾಸ್, ಕಾ॥ ಅಶ್ವಥ ನಾರಾಯಣರವರುಗಳುಮಾತನಾದರು.

ಚಿಕ್ಕ ಮಗಳೂರು

ತೋಟ ಕಾರ್ಮಿಕರು ಮತ್ತು ಕಾಫಿ ಕ್ಯೂರಿಂಗ್ ಕಾರ್ಮಿಕರು ಜಂಟಿಯಾಗಿ ಯೂನಿಯನ್ ಕಛೇರಿಯಲ್ಲಿ ಸಭೆ ಸೇರಿ ವಿಶ್ವಶಾಂತಿ ದಿನಾಚರಣೆ ಆಚರಿಸಿದರು. ಸಂಘದ ಕಾರ್ಯದರ್ಶಿ ಕಾ॥ ಎ.ಕೆ. ವಿಶ್ವನಾಥ' ಉಪಕಾರ್ಯದರ್ಶಿ ಕಾ॥ ಜಿ.ಎಸ್. ರಾಘವೇಂದ್ರ ರವರುಗಳು ಮಾತನಾಡಿ ಭಾರತದ ಶಾಂತಿ ಪ್ರಿಯ ಜನತೆ ಸಾಮ್ರಾಜ್ಯಶಾಹಿ ಯುದ್ಧ ಪಿತೂರಿ ವಿರುದ್ಧ ನಡೆಸುವ ಹೋರಾಟದಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಶ್ರಮಿಸಬೇಕೆಂದು ಕರೆ ನೀಡಿದರು. ಕೊನೆಯಲ್ಲಿ ಕಾ॥ ಎ. ವೇಲಾಯುಧ ವಂದನಾರ್ಪಣೆ ಮಾಡಿದರು.

ಬೇಲೂರು

ಹಾಸನ ಜಿಲ್ಲೆಯ ಬೇಲೂರಿನ ಶ್ರೀ ಲಕ್ಷ್ಮೀಸಾಮಿಲ್ ಕಾರ್ಮಿಕರು ಸೆಪ್ಟೆಂಬರ್ 1ರಂದು ಸಿ.ಐ.ಟಿ.ಯು, ನೀಡಿದ ಕರೆಯಂತೆ ವಿಶ್ವಶಾಂತಿ ದಿನಾಚರಣೆಯನ್ನು ಆಚರಿಸಿದರು. ಕಾ॥ಸೋಮಶೇಖರ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಕಾ॥ಎ.ಕೆ.ವಿಶ್ವನಾಥ್ ಮಾತನಾಡಿ ಭಾರತವನ್ನು ಸುತ್ತುವರಿದು ಅಣು ಯುದ್ಧಕ್ಕೆ ಪ್ರಚೋದನೆ ನೀಡುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಪಿತೂರಿಯನ್ನು ದುಡಿಯುವ ಕಾರ್ಮಿಕ ವರ್ಗ ಎದುರಿಸಿ ಜಾಗೃತಗೊಳ್ಳಬೇಕೆಂದು ಕರೆ ನೀಡಿದರು, ಕಾ॥ ನಾಗರಾಜುರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಲಾಡ-ಮುಗಳಿ

ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಆಳಂದ ತಾಲ್ಲೋಕಿನ ಲಾಡ ಮುಗಳಿಯಲ್ಲಿ ವಿಶ್ವಶಾಂತಿ ದಿನಾಚರಣೆ ಆಚರಿಸಲಾಯತು. ನೂರಾರು ರೈತ ಕೃಷಿ ಕಾರ್ಮಿಕರು ಸಭೆಯಲ್ಲಿ ಭಾಗವಹಿಸಿದರು. ಸಭೆ ಕಾ॥ಸಿದ್ರಾಮಪ್ಪ ಕೊಡದೂರ ಅವರ ಅಧ್ಯಕ್ಷತೆಯಲ್ಲಿ ನಡೆದಸಭೆಯಲ್ಲಿ ಮಾತನಾಡಿದವರು. ಅರವಿಂದನಾಗೂರ, ಕಾ॥ಮೇಘರಾಜ ಕಠಾರೆ, ಕಾ॥ಬಾಬುಮುಗಳಿ,ಕಾ॥ ಮಾರುತಿ ಮಾನಪಡೆ ಹಿಂದಿನ ಎರಡು ಮಹಾ ಯುದ್ಧಗಳ ಭೀಕರತೆಯನ್ನು ಇಂದು ಸಾಮ್ರಾಜ್ಯಶಾಹಿ ಯುದ್ಧಕ್ಕೆ ಕುಮ್ಮಕ್ಕು ಕೊಡುತ್ತಿರುವುದನ್ನು ವಿವರಿಸಿದರು. ವಿಶ್ವಶಾಂತಿಯ ಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು. ●

ದುಡಿಯುವ ಮಹಿಳೆಯರ ಸಮಾವೇಶ

ಆಗಸ್ಟ್ 15 ಸ್ವಾತಂತ್ರ್ಯ ದಿನೋತ್ಸವದಂದು ಸಿ.ಐ.ಟಿ.ಯು. ಆಶ್ರಯದಲ್ಲಿ ಧಾರವಾಡದಲ್ಲಿ ದುಡಿಯುವ ಮಹಿಳೆಯರ ಸಮಾವೇಶ ಜರುಗಿತು. ಧಾರವಾಡ ಹುಬ್ಬಳ್ಳಿ ಪ್ರದೇಶದ 8ಕಾರ್ಮಿಕ ಸಂಘಗಳು ಸುಮಾರು 150 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಶ್ರೀಮತಿ ಸರೋಜಚಿಕ್ಕೋಡಿ (ವಿದ್ಯಾಮಂಡಲ ಇಲಾಖೆ ಅಧ್ಯಕ್ಷರು) ಅಧ್ಯಕ್ಷತೆ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸದಸ್ಯೆ ಹಾಗೂ ದುಡಿಯುವ ಮಹಿಳೆಯರ ರಾಜ್ಯ ಸಮನ್ವಯ ಸಮಿತಿ ಸಂಚಾಲಕಿ ಕಾ॥ ಎಂ. ಎ. ರಾಜಮ್ಮ ಹಾಗೂ ಕಾ॥ಪದ್ಮಾವತಿ, ಕಾ॥ಕುರ್ಶಿದಾಬೇಗಂರವರು ಆಗಮಿಸಿದ್ದರು.

ಶ್ರೀಮತಿ ಪ್ರಭಾದೇಸಾಯಿ ಸ್ವಾಗತಿಸಿದರು. ಶ್ರೀಮತಿ ಮಿರಾಹಳಕಟ್ಟಿಯವರು ಸಮಾವೇಶದ ಪ್ರಾಸ್ತಾವಿಕಭಾಷಣ ಮಾಡಿದರು. ಕಾ॥ ರಾಜಮ್ಮನವರು ಮಾತನಾಡಿ ಮಹಿಳೆಯು ಉದ್ಯೋಗಾವಕಾಶ, ಸಮಾನವೇತನ, ಕೆಲಸದಭದ್ರತೆ ಹೆರಿಗೆಭತ್ಯೆ, ಮತ್ತು ರಜೆ ಮುಂತಾದ ಬೇಡಿಕೆಗಾಗಿ ಕಾರ್ಮಿಕ ಸಂಘಟನೆಯ ಕಾರ್ಯಕಾರಿಸಮಿತಿಯುಪ್ರತಿಯೊಂದು ಹಂತದಲ್ಲಿಯೂ ಕ್ರಿಯಾತ್ಮಕವಾಗಿ ದುಡಿಯಬೇಕೆಂದು ಕರೆ ನೀಡಿದರು. ಮಹಿಳೆಯರ ಮೇಲೆ ನಡೆಯುವ ಹಲ್ಲೆ ಅನ್ಯಾಯಗಳ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ನಡೆಸಲು ಶ್ರೀಮತಿ ಕುರ್ಶಿದಾಬೇಗಂ ಹಾಗೂ ಶ್ರೀಮತಿ ಪದ್ಮಾವತಿ ವಿನಂತಿಸಿದರು. ವಿವಿಧ ಸಂಘಟನೆಗಳ ನಾಯಕರು ಶುಭಾಶಯ ಕೋರಿದರು. ಈಸಮಾವೇಶದಲ್ಲಿ25ಮಂದಿಯ ಸಮನ್ವಯ ಸಮಿತಿ ಆಯ್ಕೆಗೊಂಡಿತು. ಶ್ರೀಮತಿಮಿರಾಹಳಕಟ್ಟಿ(ಸಂಚಾಲಕಿ) ಶ್ರೀಮತಿ.ಸರೋಜಾಚಿಕ್ಕೋಡಿ,ಮತ್ತು ಶ್ರೀಮತಿ,ಭಾರತಿಪೂಜಾರ್ ಸಹ ಸಂಚಾಲಕಿಯರನ್ನಾಗಿ ಆರಿಸಲಾಯಿತು. ಕೊನೆಯಲ್ಲಿ ಶ್ರೀಮತಿ.ಪ್ರಭಾದೇಸಾಯಿಯರವರು ವಂದನಾರ್ಪಣೆಮಾಡಿದರು.

ಸೆಪ್ಟೆಂಬರ್ ಪಿಕೆಟಿಂಗ್‌ಗೆ ಸಿದ್ಧತೆ

ಅಳಂದ ಕಾಲ್ನಡೆಜಾಥಾ

ಆಗಸ್ಟ್ 16ರಂದು ತಾಲೋಕಿನಲ್ಲಿ ಎರಡು ತಂಡಗಳು ಪ್ರಾರಂಭವಾಗಿ ಈಗಾಗಲೇ ತಾಲೋಕಿನ 26 ಗ್ರಾಮಗಳಲ್ಲಿ ಪ್ರಚಾರ ಕಾರ್ಯವನ್ನು ಮುಗಿಸಿದ್ದು ಸೆಪ್ಟೆಂಬರ್ 7ರಿಂದ 13ರ ರವರೆಗೆ ತಾಲ್ಲೋಕಿನ ಕೇಂದ್ರ-ರಾಜ್ಯ ಸರ್ಕಾರಗಳ ಕಛೇರಿಯನ್ನು ಪಿಕೇಟಿಂಗ್ ನಡೆಸಲು ತೀರ್ಮಾನಿಸಲಾಗಿದೆ. ಈ ಕಾಲ್ನಡೆ ಜಾಥದ ನೇತೃತ್ವವನ್ನು ರೈತ ಸಂಘದ ನಾಯಕರಾದ ಕಾ॥ ಬಾಬುರಾವ್ ಮುಗಳಿ, ಅರವಿಂದ ನಾಗೂರ ಸುಭಾಷ ಬಸವರಾಜ ಜವಳಿ, ಸಜ್ಜಾದ್‌ಅಲಿ,ವೀರಭದ್ರಯ್ಯ, ಎಸ್. ಬಿ. ಅಂಬಲಗಾ ಮುಂತಾದವರು ವಹಿಸಿದರು.

ಹೊಸಕೋಟೆ ತಾಲೋಕು

ಆಗಸ್ಟ್ 30ರಂದು 20 ಮಂದಿ ರೈತ ಸಂಘದ ಕಾರ್ಯಕರ್ತರು ಕಾಡುಗೋಡಿ ಆಫೀಸಿನಿಂದ ಸೈಕಲ್ ಜಾಥ ಹೊರಟು 30 ಹಳ್ಳಿಗಳಲ್ಲಿ ಸೆಪ್ಟೆಂಬರ್ ಚಳುವಳಿಯ ಬಗ್ಗೆ ಪ್ರಚಾರ ಕೈಗೊಂಡಿತು. ರೈತ ಸಂಘದ ಮುಖಂಡರಾದ ಕಾ॥ ಲಕ್ಕಣ್ಣ ಹಾಗೂ ಡಿ. ವೆಂಕಟೇಶಗೌಡ ವೆಂಕಟಸ್ವಾಮಿ ಮುಖಂಡತ್ವದಲ್ಲಿ ಕಾಡುಗೋಡಿ, ಹೊಸಕೋಟೆ, ಗಟ್ಟಿಗನಬ್ಬೆ ಚನ್ನಸಂದ್ರ ಪ್ರದೇಶಗಳ ಗ್ರಾಮಗಳಲ್ಲಿ ಜಾಥಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಗಿದೆ.

ಸಿರಸಿ

ಸೆಪ್ಟೆಂಬರ್ 3ರಂದು ಜಿಲ್ಲಾ ರೈತ ಕಾರ್ಯಕರ್ತರ ಸಮಾವೇಶ ಕಾ॥ ಬಂಗಾರೇಶ್ವರ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸೆಪ್ಟೆಂಬರ್ 11 ರಂದು ರೈತರ 12 ಬೇಡಿಕೆಗಳನ್ನು ಒತ್ತಾಯಿಸಿ ಶಿರಸಿ ಅಸಿಸ್ಟೆಂಟ್ ಕಮಿಶನರ್ ಕಛೇರಿಯನ್ನು ಪಿಕೇಟಿಂಗ್ ಮಾಡಲು ನಿರ್ಧರಿಸಲಾಯಿತು. ರೈತ ಕೂಲಿಕಾರರು ಭೂ ಅತಿ ಕ್ರಮಣದಾರರೆಲ್ಲ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕರೆ ನೀಡಲಾಯಿತು. ಉ. ಕನ್ನಡ ಜಿಲ್ಲಾ ರೈತ ಸಮನ್ವಯ ಸಮಿತಿಗೆ ಕಾ॥ ರಮೇಶ ಚೌಧುರಿ ಬನವಾಸಿ (ಅಧ್ಯಕ್ಷ), ಕಾ॥ ಬಂಗಾರೇಶ್ವರ ಕೆರೆಯಾಗೌಡ (ಕಾರ್ಯಾಧ್ಯಕ್ಷ ಕಾ॥ ಲಿಂಗೂ ಗೋರುಗೌಡ ಹಳದಿಪುರ ಈಶ್ವರರಾಮಾ ನಾಯ್ಕ (ಉಪಾಧ್ಯಕ್ಷರು) ಕಾ॥ ಪಿ.ಜಿ. ಮಶಾಲ್ಜಿ (ಪ. ಕಾರ್ಯದರ್ಶಿ)ಆಯ್ಕೆಯಾಗಿದ್ದಾರೆ.

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ

ಹಂಪೆಯಲ್ಲಿ ಇತ್ತೀಚಿಗೆ ನಡೆದ ಯಶಸ್ವಿ ರಾಜ್ಯದ ಅಧ್ಯಯನ ಶಿಬಿರದ ಮುಂದುವರಿಕೆಯಾಗಿ ರಾಜ್ಯದಾದ್ಯಂತ ವ್ಯಾಪಕವಾಗಿ ಸ್ಥಳೀಯ ಶಿಬಿರಗಳು ನಡೆದ ವರದಿ ಬಂದಿದೆ. ಬಂದಿರುವ ವರದಿಗಳ ಪ್ರಕಾರ ಕುಂದಾಪುರ, ಮಂಗಳೂರು, ಬೆಂಗಳೂರು ವಿರಾಜಪೇಟೆ, ಭಾರತೀನಗರ (ಮಂಡ್ಯ), ಕೋಲಾರ, ಮುಳಬಾಗಿಲು' ಚಿಂತಾಮಣಿ ಮಾಲೂರು, ಹರಿಹರ, ಸಿಂಧನೂರು ರಾಯಚೂರು, ಗಂಗಾವತಿ, ಅಳವಂಡಿ ಯಲಬುರ್ಗಾ, ತುಮಕೂರು ಧಾರವಾಡ, ಸೌದತ್ತಿ, ಬೀದರ್, ಮುದಗಲ್‌ಗಳಲ್ಲಿ ಶಿಬಿರಗಳು ಯಶಸ್ವಿಯಾಗಿ ಜರುಗಿವೆ. ಸುಮಾರು 1 ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಎಸ್.ಎಫ್.ಐ. ಕಾರ್ಯಕ್ರಮ ಸಂಘಟನಾ ನಿಯಮಾವಳಿ, ಹೊಸ ಶಿಕ್ಷಣ ನೀತಿ ಹಾಗೂ ಪ್ರಸ್ತುತ ರಾಜಕೀಯ ವಿದ್ಯಮಾನಗಳ ಕುರಿತು ಎಸ್.ಎಫ್.ಐ. ರಾಜ್ಯ ಪಧಾದಿಕಾರಿಗಳು ಹಾಗೂ ಇತರೆ ಹಲವಾರು ಶಿಕ್ಷಣ ತಜ್ಞರು ಶಿಬಿರಗಳಲ್ಲಿ ಉಪನ್ಯಾಸ ನೀಡಿದರು. ಉಳಿದ ಸ್ಥಳಗಳಲ್ಲಿ ಶಿಬಿರಗಳನ್ನು ಸೆಪ್ಟೆಬಂರ್ ತಿಂಗಳಿನೊಳಗೆ ಪೂರ್ಣಗೊಳಿಸಲು ಕರೆ ನೀಡಲಾಗಿದೆ.

ಡಿ. ವೈ. ಎಫ್. ಐ. ಘಟಕ

ಶಿಡ್ಲಘಟ್ಟ ತಾಲ್ಲೋಕು ಮಳ್ಳೂರಿನಲ್ಲಿ ಡಿ.ವೈ.ಎಫ್.ಐ.ನ ತಾಲ್ಲೋಕು ಮಟ್ಟದ 2 ದಿನಗಳ ತರಬೇತಿ ಶಿಬಿರ ಮಳ್ಳೂರಿನಲ್ಲಿ ಜರುಗಿತು. ತಾಲ್ಲೋಕಿನ ವಿವಿಧ ಭಾಗಗಳಿಂದ ಬಂದ 56 ಪ್ರತಿನಿಧಿಗಳು ಭಾಗವಹಿಸಿದ್ದ ಶಿಬಿರದಲ್ಲಿ ಕಾ॥ ಜಿ. ವಿ. ಶ್ರೀ ರಾಮ ರೆಡ್ಡಿಯವರು ಉಪನ್ಯಾಸ ನೀಡಿದರು. ಹಾಗೂ ಕಾ॥ ಆಂಜನೇಯ ರೆಡ್ಡಿ (ಸಂಚಾಲಕ) ಯವರನ್ನೊಳಗೊಂಡ 11 ಮಂದಿಯ ಸಮಿತಿಯನ್ನು ಆಯ್ಕೆಮಾಡಲಾಯಿತು.

ಶಹಾಪುರ ಕಾರ್ಮಿಕರ ಪ್ರಧಾನಿ ಭೇಟಿ

ಗುಲ್ಬರ್ಗಾಜಿಲ್ಲೆಯ ಶಹಾಬಾದ್‌ನ ಎ.ಬಿ.ಸಿ. ಅಥವಾ ಬ್ಯಾಚ್‌ಕಾಕ್ ಕಾರ್ಖಾನೆ ಸುಮಾರು ಒಂದು ವರ್ಷದಿಂದ ಮುಚ್ಚಿದ್ದು ಕಾರ್ಮಿಕರ್ ಬೀದಿ ಪಾಲಾಗಿದ್ದಾರೆ. ಲೋಕ ಸಭೆಯ ಸಿ.ಪಿ.ಐ.(ಎಂ) ನಾಯಕ ಕಾಂ. ಬಸುದೇವ್ ಆಚಾರ್ಯರ ನೇತೃತ್ವದಲ್ಲಿ ಎಂಪಿಗಳ ಒಂದು ನಿಯೋಗವೇ ಪ್ರಧಾನ ಮಂತ್ರಿಯವರನ್ನು ಭೇಟಿಮಾಡಿದಾಗ ಅವರು ಕೂಡಲೇ ಈ ಬಗ್ಗೆ ಗಮನ ನೀಡಲಾಗುವುದೆಂದು ನೀಡಿದ, ಆಶ್ವಾಸನೆಯನ್ನು ಹಿಂದೆಯೇ "ಐಕ್ಯರಂಗ" ದಲ್ಲಿ ಓದಿದ್ದೀರಿ. ಮತ್ತೆ ಅನೇಕ ತಿಂಗಳುಗಳೇ ಕಳೆದರೂ ಆಶ್ವಾಸನೆ ಬರೀ ಮಾತಾಗಿಯೇ ಉಳಿಯಿತು.

ಇದರಿಂದ ಕೃದ್ಧರಾದ ಈ ಕಾರ್ಖಾನೆಯ 1200 ಕಾರ್ಮಿಕರು "ದೆಹಲಿ ಚಲೋ" ಎಂದು ಹೊರಟರು. ಪ್ರಧಾನಿಯವರ್ನಿವಾಸದ ಮುಂದೆಯೇ ಧರಣಿ ಸತ್ಯಾಗ್ರಹ ಆರಂಭಿಸಿದರು. ಈ ಸತ್ಯಾಗ್ರಹಿಗಳನ್ನುದ್ದೇಶಿಸಿ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಮರ ಮುಖರ್ಜಿ ಪ. ಬಂಗಾಳದ ಕಾರ್ಮಿಕ ಮಂತ್ರಿ ಕಾಂ. ಶಾಂತಿ ಘಟಕ್ ಕಾಂ.ಎಂ.ಕೆ. ಪಂಧೆ, ಕಾಂ. ಸೂರಿ ಮಾತನಾಡಿದರು. ಇದಕ್ಕೆ ಮೊದಲೇ ದೆಹಲಿಯ ಪ್ರಸಿದ್ಧ ಬೋಟ್ ಕ್ಲಬ್ ಮೈದಾನದಲ್ಲಿ ಕರ್ನಾಟಕದ ಕಂದಾಯ ಸಚಿವ ಎಸ್. ಅರ್. ಬೊಮ್ಮಾಯಿಯವರೂ ಈ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು.

ಧರಣಿ ಕುಳಿತಿದ್ದ ಕಾರ್ಮಿಕರ ನಿಯೋಗವೊಂದನ್ನು ಪ್ರಧಾನಿಯವರ ನಿವಾಸದೊಳಕ್ಕೆ ಒಯ್ಯಲಾಯಿತಾದರೂ ಅಲ್ಲಿಯ ಕಾರ್ಯದರ್ಶಿಗೆ ಮನವಿ ನೀಡಲು ಹೇಳಲಾಯಿತು. ಆದರೆ ಪ್ರಧಾನಿಯನ್ನು ಭೇಟಿ ಯಾಗುವವರೆಗೂ ಹಿಂತಿರುಗಲು ಸಾಧ್ಯವಿಲ್ಲವೆಂದು ಕಾರ್ಮಿಕರು ಹಠಹಿಡಿದು ಕುಳಿತರು ಮರುದಿನ ಪ್ರಧಾನಿಯವರು ಕಾರ್ಮಿಕರ ನಿಯೋಗವೊಂದನ್ನು ಭೇಟಿ ಮಾಡುವುದು ಅನಿವಾರ್ಯವಾಯಿತು. ಈ ನಿಯೋಗದಲ್ಲಿ ಕಾಂ. ಸಮರ ಮುಖರ್ಜಿ, ಕಾಂ. ಸೂರ್ಯನಾರಾಯಣರಾವ್, ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ದಾಸ್, ಕಾಂ. ಸಿ.ಎ ಪಾಟೀಲ್ ಹಾಗೂ ಕಾರ್ಮಿಕ ಸಂಘದ ಪ್ರ. ಕಾರ್ಯದರ್ಶಿಯವರೂ ಇದ್ದರು. ಈ ನಿಯೋಗಕ್ಕೆ ಪ್ರಧಾನಿಯವರು ಕಾರ್ಖಾನೆಗೆ ಧನ ಸಹಾಯ ನೀಡಲಾಗುವುದೆಂದು ಹಾಗೂ ಕಾರ್ಖಾನೆ ಬೇರೆ ವಸ್ತುಗಳನ್ನು ತಯಾರಿಸುವ ಯೋಜನೆ ಹಾಕಿ ಲಾಭದಾಯಕವಾಗುವಂತೆ ಮಾಡಲಾಗುವುದೆಂದು ಆಶ್ವಾಸನೆ ನೀಡಿದರು. "ಎಲ್ಲಿವರೆಗೆ ಹೋರಾಟ ದಿಲ್ಲೀಯವರೆಗೆ" ಹೋರಾಟ ಎಂಬ ಘೋಷಣೆಯನ್ನು ಈ ಕಾರ್ಮಿಕರು ಪದಶಃ ಜಾರಿಗೆ ತರಬೇಕಾಯಿತು.

ಬೀಡಿ ಕಾರ್ಮಿಕರಿಗೆ ಇಂಟಕ್‌ನಿಂದ ದ್ರೋಹ

ನವದೆಹಲಿಯಲ್ಲಿ ಬೀಡಿ ಕಾರ್ಮಿಕರ ಬಗ್ಗೆ ನಡೆದ ಅಖಿಲ ಭಾರತ ತ್ರಿಪಕ್ಷೀಯ ಸಭೆಯಲ್ಲಿ ದೇಶದಲ್ಲಿರುವ 50 ಲಕ್ಷ ಬೀಡಿ ಕಾರ್ಮಿಕರಲ್ಲಿ ಕೇವಲ ಒಂಭತ್ತು ಲಕ್ಷ ಎಪ್ಪತ್ತೊಂದು ಸಾವಿರ ಕಾರ್ಮಿಕರು ಮಾತ್ರ ಪ್ರಾವಿಡೆಂಟ್ ಫಂಡ್ ಯೋಜನೆಗೆ ಒಳಗಾಗಿದ್ದಾರೆ. ಇಡೀ ದೇಶದಲ್ಲಿ ಬೀಡಿ ಕಾರ್ಮಿಕರಿಂದ ಒಟ್ಟಾರೆ ವಸೂಲಾಗಬೇಕಾದ 200 ಕೋಟಿ ರೂ ಪ್ರಾವಿಡೆಂಟ್ ಫಂಡ್‌ನಲ್ಲಿ 62ಕೋಟಿ ರೂ. ಮಾತ್ರ ವಸೂಲಾಗುತ್ತಿದೆ. ಈ ವಸೂಲಾತಿಯಲ್ಲಿ ಕರ್ನಾಟಕದಿಂದಲೇ 42 ಕೋಟಿ ರೂ. ಕರ್ನಾಟಕದಲ್ಲಿರುವ ಒಟ್ಟು 5-6 ಲಕ್ಷ ಕಾರ್ಮಿಕರಲ್ಲಿ ಕೇವಲ 2,70,000 ಜನರಿಗೆಮಾತ್ರ ಪಿ.ಎಫ್ ಯೋಜನೆಯ ಪ್ರಯೋಜನ ಬೀಡಿ ಕಾರ್ಮಿಕರಿಗೆ ಒಟ್ಟು 138 ಕೋಟಿ ರೂ ವಂಚಿಸಿರುವ ಬೀಡಿ ಮಾಲೀಕರ ವಾದವೆಂದರೆ "1977-85ರ ಅವಧಿಯಲ್ಲಿ ಕಾರ್ಮಿಕರಿಂದ ನಾವು ಫಾವಿಡೆಂಟ್ ಫಂಡ್ ಕಂತು ವಸೂಲಿ ಮಾಡಿಲ್ಲ. ಈಗ ಹಣ ವಸೂಲಿಮಾಡಿದರೆ ನಮ್ಮ ಕಾರ್ಖಾನೆಗಳು ದಿವಾಳಿಯಾಗುತ್ತವೆ. ಆದುದರಿಂದ ವಿನಾಯಿತಿ ನೀಡಬೇಕು" ಎಂದು. ಇವರ ತಾಳಕ್ಕೆ ತಕ್ಕಂತೆ ಕುಣಿಯುವ ಕೇಂದ್ರ ಸರ್ಕಾರವೂ ವಸೂಲಾತಿ ಕ್ರಮ ಕೈಗೊಳ್ಳಲು ಮನಸ್ಸ ಮಾಡಿಲ್ಲ ಮಾತ್ರವಲ್ಲ ಅಧಿಕಾರಿಗಳಿಗೆ ಈ ಬಗ್ಗೆ ಸಡಿಲವಾಗಿರಬೇಕೆಂಬ ಸೂಚನೆ ಬೇರೆ. ಈ ಕಾರ್ಮಿಕ ದ್ರೋಹಕ್ಕೆ ಇಂಟಕ್‌ನ ಪ್ರತಿನಿಧಿ ಆಡ್ಯಾಂತಾಯ ಬೆಂಬಲವಿನಾಯಿತಿನೀಡಿ ಎಂದು ಅವರ ಮನವಿ.

ಸಿ.ಐ.ಟಿ.ಯು. ಪ್ರತಿನಿಧಿಯಾಗಿ ಸಭೆಯಲ್ಲಿ ಭಾಗ ವಹಿಸಿದ್ದ ಕಾಂ. ಸೂರಿಯವರು ಪಿ.ಎಫ್. ಯೋಜನೆ ಜಾರಿಗೆ ತರದ ಬೀಡಿ ಮಾಲೀಕ ಮೇಲೆ ಯಾವುದೇ ದಯೆ ದಾಕ್ಷಿಣ್ಯ ವಿಲ್ಲದೆ ಉಗ್ರ ಕ್ರಮಕ್ಕೆಗೊಳ್ಳಬೇಕು, ಜೈಲಿಗೆ ಹಾಕಬೇಕು. ಕಾರ್ಮಿಕರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯವನ್ನು ನೀಡಬೇಕು. ಎಂದು ಪ್ರತಿ ಪಾದಿಸಿದರು.

ಅಧ್ಯಾಪಕರ ಒಪ್ಪಂದ ಪ್ರಜಾಪ್ರಭುತ್ವ ವಿರೋಧಿ

ಪಾಲಿಟ್‌ಬ್ಯೂರೋ ಹೇಳಿಕೆ

'ಐಕ್ಯರಂಗ'ದ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಅಧ್ಯಾಪಕರ ಅಖಿಲ ಭಾರತ ಸಂಘಟನೆ ಹಾಗೂ ಕೇಂದ್ರ ಸರಕಾರದ ನಡುವೆ ಆದ ಒಪ್ಪಂದದ ಬಗ್ಗೆ ಆ ಸಂಘಟನೆಯ ಅಧ್ಯಕ್ಷ ತೇಕೆದಾತ್‌ರವರ ಹೇಳಿಕೆ ಹಾಗೂ ಅದರ ಆಧಾರದ ಬರಹವನ್ನು ಓದಿದ್ದೀರಿ. ಆದರೆ ನಂತರದ ಬೆಳವಣಿಗೆಗಳಲ್ಲಿ ಈ ಒಪ್ಪಂದ 2 ಲಕ್ಷ 30 ಸಾವಿರ ಅಧ್ಯಾಪಕರ 34ದಿನಗಳ ಧೀರೋದಾತ್ತ ಹೋರಾಟದ ಆಶಯಗಳಿಗೆ ಅನುಗುಣವಾಗಿಲ್ಲವೆಂಬುದು ವ್ಯಕ್ತವಾಗಿದೆ. ಈ ಬಗ್ಗೆ ಸಿ. ಪಿ. ಐ (ಎಂ)ನ ಪಾಲಿಟ್‌ಬ್ಯೂರೊ ಹೇಳಿಕೆಯನ್ನು ಮುಂದೆ ಓದಿ.

ಅಖಿಲ ಭಾರತ ಕಾಲೇಜು ಹಾಗೂ ಹಾಗೂ ವಿ.ವಿ.ಅಧ್ಯಾಪಕರ ಸಂಘಗಳ ಒಕ್ಕೂಟ (ಐಫುಕೋಟ್ಟೊ) ಹಾಗೂ ಕೇಂದ್ರ ಸರಕಾರ ಮಾಡಿಕೊಂಡ ಒಪ್ಪಂದ ಅಧ್ಯಾಪಕರ ನ್ಯಾಯಯುತವಾದಬೇಡಿಕೆಗಳಲೊಂದನ್ನೂ ಈಡೇರಿಸದ ಒಪ್ಪಂದ ಎಂದು ಸಿ. ಪಿ. ಐ.(ಎಂ)ನ ಪಾಲಿಟ್‌ಬ್ಯೂರೊ ಅಭಿಪ್ರಾಯಪಟ್ಟಿದೆ.

ಕೇಂದ್ರ ಸರಕಾರ ಅಧ್ಯಾಪಕ ಬೇಡಿಕೆಗಳ ಬಗ್ಗೆ ಮುಂದಿಟ್ಟ ಪ್ರಸ್ತಾವಗಳನ್ನು ಐಫುಕೋಟ್ಟೊ ಅಧಿಕಾರ ವರ್ಗ ಒಪ್ಪಿಕೊಂಡದ್ದು ಪ್ರಜಾಸತ್ತಾತ್ಮಕ ನಡೆವಳಿಕೆಗೆ ವಿರೋಧವಾದುದು ಎಂದು ಪಿ.ಬಿ ತಿಳಿಸಿದೆ.

ಅಖಿಲ ಭಾರತ ಕಾರ್ಯಕಾರಿ ಸಮಿತಿಯ ತೀರ್ಮಾನವಿಲ್ಲದೆ ಒಕ್ಕೂಟದ ಅಧಿಕಾರವರ್ಗ ಈ ಒಪ್ಪಂದ ಮಾಡಿಕೊಂಡಿದೆ. ದೀರ್ಘವಾದ ಹೋರಾಟಗಳ ಮೂಲಕ ಅಧ್ಯಾಪಕರು ಗಳಿಸಿದ್ದ ಅನೇಕ ಹಕ್ಕುಗಳಿಗೆ ಈ ಒಪ್ಪಂದದಿಂದ ಹಾನಿಯಾಗುತ್ತದೆಂದು ಪಿ.ಬಿ. ಹೇಳಿಕೆ ತಿಳಿಸಿದೆ.

ಇದಕ್ಕೊಂದು ಸ್ಪಷ್ಟ ಉದಾಹರಣೆ ಒಪ್ಪಂದದಲ್ಲಿ ಅಡಕವಾಗಿರುವ ಪ್ರವೇಶನ್ ನೀತಿ.

ಕೇಂದ್ರ ಸರಕಾರದಅಧ್ಯಾಪಕವಿರೋಧಿನೀತಿಗಳಿಗೆದುರಾಗಿಧೀರ ಹೋರಾಟ ಮಾಡಿದ ಅಧ್ಯಾಪಕರಿಗೆ ನಿರಾಸೆಯಾಗುವಂತಹ ಒಪ್ಪಂದ ಇದು. ಈ ಒಪ್ಪಂದದ ಬಗ್ಗೆ ಆತಂಕಗೊಂಡಿರುವ ಅಧ್ಯಾಪಕರ ಜೊತೆಗೆ ತನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಇನ್ನೂ ಹೆಚ್ಚು ಬಲಿಯುತವಾದ ಹೋರಾಟದಲ್ಲಿ ತೊಡಗಬೇಕೆಂದು ಪಿ.ಬಿ. ಕರೆ ನೀಡಿದೆ. ಅವರ ಸಂಘಟನೆಗಳಲ್ಲಿರುವ ನ್ಯೂನತೆಗಳನ್ನು ಪ್ರಜಾ ಪ್ರಭುತ್ವ ರೀತಿಯಲ್ಲಿ ಪರಿಹರಿಸಿಕೊಳ್ಳುತ್ತಾರೆಂದು ಪಿ. ಬಿ. ವಿಶ್ವಾಸ ವ್ಯಕ್ತಪಡಿಸಿದೆ.

ಸೆ. 21ರಿಂದ ಕಾ|| ಸೂರಿ ಅನಿರ್ದಿಷ್ಠ ಉಪವಾಸ ಸತ್ಯಾಗ್ರಹ

ಬಿ.ಇ.ಎಲ್. ನಲ್ಲಿ ಇತ್ತೀಚೆಗಿನ ಚುನಾವಣೆಗಳಲ್ಲಿ ಶೇ 24ರಷ್ಟು ಕಾರ್ಮಿಕರ ಮತವನ್ನು ಪಡೆದ ಸಿ.ಐ.ಟಿ.ಯು.ವನ್ನೂ ವೇತನ ಒಪ್ಪಂದಗಳ ಮಾತುಕತೆಗೆ ಕರೆಯಬೇಕೆಂದು ಒತ್ತಾಯಿಸಿ ಕಾಂ.ಎಸ್.ಸೂರ್ಯನಾರಾಯಣ ರಾವ್ ದಿನಾಂಕ 21.9.87 ರಿಂದ ಅನಿರ್ದಿಷ್ಟ ಕಾಲ ಉಪವಾಸ ಮುಷ್ಕರ ಕೈಗೊಳ್ಳಲಿದ್ದಾರೆ. ಇದಕ್ಕೆ ಬೆಂಬಲವಾಗಿ ದಿನಾಂಕ 17.9.87 ರಿಂದಲೇ ಧರಣಿ ಸತ್ಯಾಗ್ರಹ ಆರಂಭವಾಗುತ್ತದೆ. ಇತ್ತೀಚೆಗೆ ಬಿ. ಇ. ಎಲ್. ಮುಂದೆ ಸಭೆ ನಡೆಸಿದಾಗ ಪ್ರತಿ ಬಸ್ ಹಾಗೂ ಆಟೋಗಳನ್ನ ತಡೆ ಹಾಕಿ ಪರೀಕ್ಷೆ ನಡೆಸಿದರೂ ಕಾರ್ಮಿಕರು ಉತ್ಸಾಹದಿಂದ ನಿಂತು ಗೇಟ್ ಮೀಟಿಂಗ್‌ನಲ್ಲಿ ಭಾಗವಹಿಸಿದರು. ಕಾರ್ಮಿಕರಲ್ಲಿ ಒಟ್ಟನಲ್ಲಿ ಸಿ.ಐ.ಟಿ.ಯೂ. ಪ್ರಭಾವ ಹೆಚ್ಚುತ್ತಿದೆ.

ಸಚಿವರೊಡನೆ ಮಾತುಕತೆ ಹಸಿರು ಕಾರ್ಡು ಹಂಚಲು ಒತ್ತಾಯ

ಕರ್ನಾಟಕ ಪ್ರಾಂತ ರೈತಸಂಘದ ರಾಯಚೂರು ಜಿಲ್ಲೆಯ ಕುಷ್ಟಗಿ ತಾಲೋಕು ಸಮಿತಿ ಆಗಸ್ಟ್ 20ರಂದು ರೈತರ ಪ್ರಮುಖ ಬೇಡಿಕೆಗಳಾದ ಕೊಳವೇ ಬಾವಿ, ಜನತಾ ಮನೆ ವೇತನ ಐ.ಆರ್.ಡಿ.ಪಿ. ಸಾಲ ಮಂಜೂರು ಹಸಿರು ಕಾರ್ಡ್ ವಿತರಣೆ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಮೆರವಣಿಗೆ ನಡೆಸಿ. ಸಚಿವ ಬಸವರಾಜ ಪಾಟೀಲ್ ಅನ್ವರಿಯವರಿಗೆ ಮನವಿ ಪತ್ರ ಅರ್ಪಿಸಿ ಮಾತುಕತೆ ನಡೆಸಲಾಯಿತು.

ಮಹಿಳೆಯರಿಗೆ ಶೌಚಗೃಹವನ್ನು ಮಂಜೂರಿಗೆ ಶಿಫಾರಸು ಮಾಡಿದ ಸಚಿವರು. ಪತ್ರಿಯೊಬ್ಬರಿಗೂ ಹಸಿರು ಕಾರ್ಡ್ ನೀಡಲು ಸಾಧ್ಯವಾಗದೆಂದು ಹೇಳಿದರು. ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ||ಆರ್.ಕೆ. ದೇಸಾಯಿ, ವಿರುಪಾಕ್ಷ ಹಿರೇಮಠ, ಆಡಿವೆಪ್ಪ, ಗೆದ್ದಲ್ಲಪ್ಪ ಪೂಜಾರಿ, ಯವರುಗಳು ಮಾತನಾಡಿಹಸಿರುಕಾರ್ಡುನೀಡುವಲ್ಲಿ ವಿಫಲವಾಗುವ ಸರ್ಕಾರದ ನೀತಿಯನ್ನು ಖಂಡಿಸಲಾಗುವುದೆಂದು ಸಚಿವರಿಗೆ ತಿಳಿಸಿ ಮುಂದೆ ದೊಡ್ಡ ಪ್ರಮಾಣದಲ್ಲಿ ಹೋರಾಟಕ್ಕೆ ಸಿದ್ಧರಾಗಲು ರೈತರಿಗೆ ಕರೆ ನೀಡಲಾಯಿತು.

ಎಸ್. ಎಫ್. ಐ. ಬೇಡಿಕೆ ದಿನಾಚರಣೆ

ರಾಯಚೂರು

ಆಗಸ್ಟ್ 14 ರಂದು ಎಸ್. ಎಫ್. ಐ. ರಾಜ್ಯ ಸಮಿತಿ ಕರೆಯಂತೆ ರಾಯಚೂರಿನಲ್ಲಿ ಡಿ.ವೈ.ಎಫ್.ಐ. ಜೊತೆ ಸೇರಿ ವಿದ್ಯಾರ್ಥಿ-ಯುವ ಜನರ 25 ಬೇಡಿಕೆಗಳನ್ನು ಒತ್ತಾಯಿಸಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ನಂತರ ಕಾಟೀ ದರವಾಜದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಾ.ರಾಮನಗೌಡ, ವೆಂಕಟೇಶ ಮಾತನಾಡಿದರು.

ಕನಕಗಿರಿ

ಗಂಗಾವತಿಯ ಕನಕಗಿರಿಯಲ್ಲಿ ಆಗಸ್ಟ್ 14 ರಂದು ಸುಮಾರು 200 ವಿದ್ಯಾರ್ಥಿಗಳು ಮೆರವಣಿಗೆ ಹೊರಟು ಮಂಡಳದ ಪ್ರಧಾನರಿಗೆ 25 ಬೇಡಿಕೆಗಳ ಮನವಿ ಅರ್ಪಿಸಿ ವಿದ್ಯಾರ್ಥಿಗಳಿಗೆ ಸರಿಯಾಗಿ'ಬಸ್ ಪಾಸ್ ನೀಡುವಂತೆ ಒತ್ತಾಯಿಸಲಾಯಿತು. ಕಾ.ತಿಮ್ಮಪ್ಪ ನಜ್ಜಬಂಡಿ, ಮಾತನಾಡಿದರು. ಕಾ. ಅರವಿಂದ ಮೆರವಣಿಗೆ ನೇತೃತ್ವ ವಹಿಸಿದ್ದರು.

ಯಲಬುರ್ಗಾ

ಆಗಸ್ಟ್ 7 ರಂದು ಯಲಬುರ್ಗಾ ಹಿರೋಷಿಮಾ ದಿನಾಚರಣೆಯನ್ನು ಆಚರಿಸಲಾಯಿತು. ಮಂಡಲ ಪ್ರಧಾನರಾದ ಶ್ರೀಮಲ್ಲೇಶಗೌಡ ಉದ್ಘಾಟಿಸಿದರು. ಕಾ.ಗಂಗಾಧರ ಕುಷ್ಟಗಿ ಅಧ್ಯಕ್ಷತೆ ವಹಿಸಿದ್ದರು. ಯುದ್ಧ ಶಾಂತಿ ಕುರಿತು ಸಮಾಜವಾದಿ – ಬಂಡವಾಳಶಾಹಿ ರಾಷ್ಟ್ರಗಳ ನಿಲುವು, ಕುರಿತು ಶ್ರೀ ಕೆಂಚಿರೆಡ್ಡಿಯವರು ಹಿರೋಷಿಮಾ ನಾಗಸಾಕಿ ಅಣುಬಾಂಬ್ ದಾಳಿಯ ದುಷ್ಪರಿಣಾಮ ಕುರಿತು ನಿಂಗೋಜಿಯವರು ಅಣುಬಾಂಬ್ ನಿಷೇಧಕ್ಕಾಗಿ ಸಮಾಜವಾದಿ ರಾಷ್ಟ್ರಗಳ ಪ್ರಯತ್ನ ಕುರಿತು ವೀರ ಭದ್ರಗೌಡರವರು ಉಪನ್ಯಾಸ ನೀಡಿದರು.

ಸೆಪ್ಟೆಂಬರ್ 2 ರಂದು ಯಲಬುರ್ಗಾ ಎಸ್. ಎಫ್. ಐ. ನ ವಿದ್ಯಾರ್ಥಿನಿಯರ ಉಪಸಮಿತಿಯನ್ನು ರಚಿಸಲಾಯಿತು. ಅಕ್ಕಮ್ಮ(ಸಂಚಾಲಕಿ) ಸುಧಾ ಸಹ ಸಂಚಾಲಕಿಯನ್ನೊಳಗೊಂಡು 7 ಜನರ ಸಮಿತಿ ರಚಿಸಲಾಗಿದೆ.

ಹರಿಹರ

ಆಗಸ್ಟ್ 14 ರಂದು ಎಸ್.ಎಫ್. ಐ. ಕಾರ್ಯಕರ್ತರು ಎಸ್.ಜೆ.ವಿ.ಸಿ. ಕಾಲೇಜಿನ ಮುಂದೆ ಕಾಲೇಜುಗ ವಿದ್ಯಾರ್ಥಿ ನಿಲಯ ಪ್ರಾರಂಭಿಸಲು ಒತ್ತಾಯಿಸಿ ಮತ ಪ್ರದರ್ಶನ ನಡೆಸಿದರು. ನಂತರ ಮೆರವಣಿಗೆಯಲ್ಲಿ ತೆರಳಿ ತಹಸೀಲ್ದಾರ್‌ರವರಿಗೆ 25 ಬೇಡಿಕೆಗಳ ಮನವಿ ಪತ್ರವನ್ನು ಅರ್ಪಿಸಿ ನಡೆಸಿದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ. ಅಣ್ಣಪ್ಪ, ಕಾ. ನಿತ್ಯಾನಂದಸ್ವಾಮಿ ಮಾತನಾಡಿದರು.

ಡಿ. ವೈ. ಎಫ್. ಐ. ಸಮ್ಮೇಳನ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ ಮಂಗಳೂರಿನ ನೆಲ್ಲಿತೀರ್ಥ ಘಟಕದ ಸಮ್ಮೇಳನ ಆಗಸ್ಟ್24ರಂದು ಕಾ||ಜಯಾನಂದರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘಟನೆಯ ಕಾರ್ಯಕ್ರಮ ಮತ್ತು ಸಂವಿಧಾನ ಕುರಿತು ಜಿಲ್ಲಾ ಅಧ್ಯಕ್ಷ ಕಾ||ಬಿ.ಎಂ.ಮಾಧವ ಮತ್ತು ಕಾ||ಆನಂದಉಳ್ಳಾಲ ಮಾತನಾಡಿದರು. ಸಮ್ಮೇಳನವು ಕಾ||ಜಯಾನಂದ(ಅಧ್ಯಕ್ಷ) ಕಾ||ಆನಂದನೇವಾಡಿಗ (ಉಪಾಧ್ಯಕ್ಷ) ಮೌರಿಸ್(ಕಾರ್ಯದರ್ಶಿ) ವಾಸ್ಯರನೆಲ್ಲಿತೀರ್ಥ (ಜೊತೆ ಕಾರ್ಯದರ್ಶಿ) ಕಾ||ಹರಿಪ್ರಕಾಶ್ (ಖಜಾಂಚಿ)ರವರನ್ನು ಮತ್ತು 6ಮಂದಿ ಸಮಿತಿ ಸದಸ್ಯರನ್ನು ಆಯ್ಕೆಮಾಡಿತು. ಎಸ್.ಎಫ್.ಐ.ನ ಕಾ||ವಸಂತಅಚಾರಿ ಸ್ವಾಗತಿಸಿ, ಕುಪ್ಪೆಪದವು ವಲಯ ಕಾರ್ಯದರ್ಶಿ ಕಾ. ಸದಾಶಿವದಾಸ್ ಧನ್ಯವಾದವನ್ನಿತ್ತರು.

ಭೀಕರ ಬರಗಾಲ ಸರಕಾರದ ವೈಫಲ್ಯ

ಭಾರತದ ಜನಕೋಟಿ ಸ್ವಾತಂತ್ರ್ಯ ಪಡೆದು ನಲ್ವತ್ತು ವರ್ಷಗಳ ನಂತರ ಭೀಕರ ಬರಗಾಲಕ್ಕೊಳಗಾಗಿದ್ದಾರೆ. ಈ ವರ್ಷದ ಬರಗಾಲ ಈ ಶತಮಾನದಲ್ಲಿಯೇ ಅತಂತ್ಯ ಕರಾಳ ಸ್ವರೂಪದ್ದಾಗಿದೆ. ಎಂದು ರಾಷ್ಟ್ರೀಯ ಪತ್ರಿಕೆಗಳಲ್ಲಿ ವರದಿಯಾಗಿದೆ. ಸಂಸತ್ತಿನಲ್ಲಿ ಚರ್ಚೆಗಳಲ್ಲಿ ತಿಳಿದುಬಂದಿದೆ. ದೇಶದ ಒಟ್ಟು 470 ಜಿಲ್ಲೆಗಳಲ್ಲಿ 11 ರಲ್ಲಿ ಪೂರ್ಣವಾಗಿಯೂ 152ರಲ್ಲಿ ಅಂಕಿತವಾಗಿಯೂ ಬರಗಾಲ ಹರಡಿವೆ. ಮುಂದಿನ ತಿಂಗಳುಗಳಲ್ಲಿ ಬರಗಾಲ ಬಾಧೆ ಇನ್ನಷ್ಟು ತೀವ್ರವಾಗಲಿದೆ.

ಏಷ್ಯಾದ ಬರಗಾಲ ಪರಿಸ್ಥಿತಿಯು, ದೇಶದಲ್ಲಿ ನಾಲ್ಕು ದಶಕಗಳ ಕಾಲದ ಕಾಂಗ್ರೆಸ್ ಆಳ್ವಿಕೆಯು ಆರ್ಥಿಕ ಅಭಿವೃದ್ಧಿ ಯೋಜನೆಗಳ ಪೂರ್ಣ ವೈಫಲ್ಯವಾಗಿದೆ.

ನಾಲ್ಕು ತಿಂಗಳ ಹಿಂದೆಯಷ್ಟೇ ಕೇಂದ್ರ ಕೃಷಿ ಮಂತ್ರಿ ಯೋಗೇಂದ್ರ ಮಖ್ವಾನ ದೇಶದ ಯಾವ ಪ್ರದೇಶದಲ್ಲಿಯೂ ಬರಗಾಲವಿಲ್ಲ ಎಂದು ಘೋಷಿಸಿದ್ದರು. ಅದೇ ಮಂತ್ರಿ, ಇಂದು ಭೀಕರ ಬರಗಾಲದ ಪರಿಸ್ಥಿತಿಯಲ್ಲಿ ಪರಿಹಾರ ಕಾರ್ಯಗಳ ಹೊಣೆ ಸಂಪೂರ್ಣವಾಗಿ ರಾಜ್ಯ ಸರಕಾರಗಳ ಮೇಲಿದೆ ಎಂದು ಕೇಂದ್ರ ಸ್ವಲ್ಪ ನೆರವು ನೀಡಬಹುದು ಅಷ್ಟೇ ಎಂದು ತಮ್ಮ ಜವಾಬ್ದಾರಿಯನ್ನು ಜಾರಿಸಿಕೊಂಡಿದ್ದಾರೆ!

ಒಂದೆಡೆ ಬಿಹಾರ, ಪ.ಬಂಗಾಳ, ಅಸ್ಸಾಂ ರಾಜ್ಯಗಳು ತೀವ್ರ ನೆರೆ ಹಾವಳಿಗೊಳಗಾಗಿ ಲಕ್ಷಾಂತರ ಜನರು ಕಷ್ಟನಷ್ಟಕೊಳ್ಳಗಾಗಿ ನಿರ್ಗತಿಕರಾಗಿದ್ದಾರೆ ಮತ್ತು ಈ ಪ್ರದೇಶಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿ, ಬೆಳೆ, ಪಶುಸಂಪತ್ತು ನಾಶವಾಗಿವೆ. ಇನ್ನೊಂದೆಡೆ 21 ರಾಜ್ಯಗಳಲ್ಲಿ ಭೀಕರ ಬರಗಾಲ ಹರಡಿದೆ. ಮುಂಗಾರು ಮಳೆಯು ತೀವ್ರ ಅಭಾವದಿಂದ ಭಾರತದ ಜಲಸಂಪತ್ತು ಶೀಘ್ರವಾಗಿ ಕರಗುತ್ತಾ, ಇನ್ನು ಹತ್ತು ವರ್ಷಗಳಲ್ಲಿ ಇಥಿಯೋಪಿಯಾ ದೇಶದ ಮಾದರಿಯ ಭೀಕರ ಬರಗಾಲ ಬರಲಿದೆ ಎಂದು ಅನೇಕ ತಜ್ಞರು ಅಭಿಪ್ರಾಯಪಟ್ಟಿದ್ದು, ಅಂತಹ ದುರ್ದಿನ ಸಮೀಪಿಸುತ್ತಿದೆ ಎಂದು ಭಯ ಪಡಲಾಗದೆ!

ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಿಂದ ಜನರು ಬರಗಾಲಕ್ಕೊಳಗಾಗಿದ್ದಾರೆ. ಇದು ತನಕ ರೂ 1198 ಕೋಟಿಯಷ್ಟು ಕೃಷಿ ಉತ್ಪಾದನೆ ಮತ್ತು ರೂ. 1608 ಕೋಟಿಯಷ್ಟು ಕೈಗಾರಿಕಾ ಉತ್ಪಾದನೆ ನಷ್ಟವಾಗಿದೆ. ಎಂದು ಅಂದಾಜು ಮಾಡಲಾಗಿದೆ. ಪರಿಣಾಮವಾಗಿ ಭೂಹೀನಕೃಷಿಕಾರ್ಮಿಕರು ಮತ್ತು ಬಡ ರೈತರು ಅತ್ಯಂತ ದಾರುಣ ಸ್ಥಿತಿಗೊಳಗಾಗಿದ್ದಾರೆ. ಪಶು ಸಂಪತ್ತು ನಾಶವಾಗುತ್ತಿದೆ.

ರಾಜಸ್ತಾನ,ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಇದೀಗ ನಾಲ್ಕನೇ ವರ್ಷದ ಬರಗಾಲ. ರಾಜಸ್ಥಾನದಲ್ಲಿ 31000 ಗ್ರಾಮಗಳು ಬರಗಾಲ ಪೀಡಿತವಾಗಿದ್ದು ಶೇ.70-75 ರಷ್ಟು ಖರೀಫ್ ಬೆಳೆಯು ಮಳೆಯ ಅಭಾವದಿಂದ ನಾಶ ಗೊಂಡಿದೆ. 14 ಲಕ್ಷ ಕೃಷಿ ಕಾರ್ಮಿಕರು ಪರಿಹಾರ ಕಾರ್ಯಗಳಲ್ಲಿ ದುಡಿಯುತ್ತಿದ್ದರೂ, ಅವರಿಗೆ ಸರಿಯಾದ ಕೂಲಿ ಸಿಗುತ್ತಿಲ್ಲ ಎಂದು ದೂರುಬರುತ್ತಿದೆ. ಮ.ಪ್ರದೇಶದಲ್ಲಿ 381ನಗರಗಳೂ 15000ಗ್ರಾಮಗಳು ಬರಗಾಲದಿಂದಾಗಿ ಕುಡಿಯುವ ನೀರು, ಮೇವುಗಳ ಅಭಾವಕ್ಕೊಳಗಾಗಿವೆ. ಲಕ್ಷಾಂತರಜನರು ಉದ್ಯೋಗಕ್ಕಾಗಿ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ವಲಸೆಹೋಗುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಭೀಕರ ಬರಗಾಲದ ಪರಿಯೇ ಇಲ್ಲ ಎಂಬಂತೆ ಮುಖ್ಯಮಂತ್ರಿ ಎಸ್. ಬಿ. ಚವ್ಹಾಣ ಮತ್ತು ಮುಖ್ಯಮಂತ್ರಿ ಆಗ ಬಯಸುವ ಶರದ್‌ಪವಾರ್ ಇವರೊಳಗೆ ತೀವ್ರ ರಾಜಕೀಯ ತಿಕ್ಕಾಟಗಳಾಗುತ್ತೀವೆ ! ರಾಜ್ಯದ ಶ್ರೀಮಂತ ಬಲಿಷ್ಟ ಕಬ್ಬು ಬೆಳೆಗಾರರು ಎಲ್ಲಾ ನೀರಾವರಿ ಸೌಕರ್ಯಗಳನ್ನು ಕಬಳಿಸುತ್ತಿದ್ದಾರೆ. ಜೀವನಾವಶ್ಯಕ ಆಹಾರಧ್ಯಾನಗಳ ಬೆಳೆಗೆ ಜಲಾಶ್ರಯವಿಲ್ಲದೆ ಅಪಾರ ಕಷ್ಟನಷ್ಟಗಳಾಗುತ್ತಿವೆ.

ಗುಜರಾತ್, ಹರಿಯಾಣ ರಾಜ್ಯಗಳಲ್ಲಿ ಮೂರನೇಯ ವರ್ಷ ಬರಗಾಲ ಬಾಧಿಸುತ್ತಿದೆ. ಗುಜರಾತಿನ 19 ಜಿಲ್ಲೆಗಳಲ್ಲಿ 16 ಜಿಲ್ಲೆಗಳೂ, 18000 ಗ್ರಾಮಗಳಲ್ಲಿ 15000 ಗ್ರಾಮಗಳು ತೀವ್ರ ಬರಗಾಲ ಕ್ಕೊಳಗಾಗಿವೆ. ಈ ರಾಜ್ಯದ ಕೆಲವು ಪ್ರದೇಶಗಳಲ್ಲಿ 1 ಕಿ. ಮೇವಿನ ಬೆಲೆ 1 ಕಿ.ಗೋಧಿಯ ಬೆಲೆಯಷ್ಟೇ ಆಗಿದೆ! ಹರಿಯಾಣದಲ್ಲಿ ಶೇ. 30ರಷ್ಟು ಖರೀಫ್ ಬೆಳೆ ಈ ವರ್ಷ ನಾಶವಾಗಿದೆ.

ಉತ್ತರ ಪ್ರದೇಶದಲ್ಲಿ ಮೊತ್ತ ಮೊದಲು 57 ಜಿಲ್ಲೆಗಳಲ್ಲಿ50ರಲ್ಲಿ ಬರಗಾಲ ಪರಿಸ್ಥಿತಿ ಇದೆ. ಅಲ್ಲಿನ 45 ಲಕ್ಷ ಕೃಷಿ ಕೂಲಿಕಾರರು ಇದುವರೆಗೆ ಇಂತಹ ಭಯಂಕರ ಬಲಗಾಲ ಕಂಡಿರಲಿಲ್ಲ. ಜೂನ್ ಮತ್ತು ಜುಲೈ ತಿಂಗಳಲ್ಲಿ ಈ ರಾಜ್ಯದ ಬಹುಭಾಗದಲ್ಲಿ ಶೇ23ಮತ್ತು ಶೇ57ರಷ್ಟೇ ಮಳೆಯಾಗಿತ್ತು. ನೀರಿನ ಅಭಾವದ ದುರ್ಲಾಭಪಡೆದುಶ್ರೀಮಂತ ರೈತರು ತಮ್ಮ ತೂತು ಬಾವಿಯನ್ನು

ಈ ದೇಶ ಹಿಂದೆಂದೂ ಕಾಣದ ಬರಗಾಲವನ್ನೆದುರಿಸುತ್ತಿದೆ. ಈ ಬರಗಾಲದ ತೀವ್ರತೆಯ ಬಗ್ಗೆ ಕೂಡಲೇ ಕೈ ಗೊಳ್ಳಬೇಕಾದ ಪರಿಹಾರದ ಬಗ್ಗೆ ವಿವರಿಸುತ್ತಾರೆ. ಕಾಂ.ಆರ್. ಚಂದ್ರ.

ಬಳಸಲು ಬಡರೈತರಿಗೆಗಂಟೆಗೆ ರೂ14-18ರಷ್ಟು ಬಾಡಿಗೆ ವಸೂಲಿ ಮಾಡುತ್ತಿದ್ದರೆ! ಶ್ರೀಮಂತ ರೈತರುಸರಕಾರದ ತೂತು ಬಾವಿಗಳ ಮತ್ತು ಕಾಲುವೆ ನೀರಿನ ಸೌಕಾರ್ಯಗಳನ್ನು ತಾವೇ ಕಬಳಿಸಿ ಕೊಂಡಿದ್ದಾರೆ.

ಹಿಮಾಚಲ ಪ್ರದೇಶದ ತೀವ್ರ ಬರಗಾಲದಿಂದಾಗಿ 4.7ಮಿ. ಹೈನು ಸಂಪತ್ತು, ದನಕರುಗಳು, ಆಡುಗಳು, ಕುರಿಗಳು, ನೀರು ಮೇವು ಇಲ್ಲದೆ ಸರ್ವನಾಶವಾಗುವ ಸಂಭವವಿದೆ.

ಪಂಜಾಬ್-ಭಾರತದ ಆಹಾರ ಕಣಜವಾದ ಈ ರಾಜ್ಯದಲ್ಲಿ ಮೊತ್ತ ಮೊದಲು ಬರಗಾಲ ಬಂದಿದೆ. ಖರೀಫ್ ಬೆಳೆ ಬಿತ್ತಿದುದೇ ಶೇ70ರಷ್ಟು ಅದನ್ನು ಉಳಿಸಲು ತೂತು ಬಾವಿಗಳ ಹಾಗೂ ಕಾಲುವೆಗಳ ನೀರನ್ನು ಬಳಸಲು ಪ್ರಯತ್ನ ನಡೆಯುತ್ತಿದ್ದರೂ ಪಂಜಾಬ್-ಹರಿಯಾಣ ರಾಜ್ಯಗಳ ನಡುವಿನ ನದೀ ನೀರಿನ ಜಗಳದಿಂದಾಗಿ ಭಾರೀನಷ್ಟ ಸಂಭವಿಸಲಿದೆ. ಭೂಗರ್ಭದ ಜಲಾಶಯವನ್ನು ಪಡೆಯಲು ಅಪಾರ ಪ್ರಮಾಣದಲ್ಲಿ ಹಣ, ಪೆಟ್ರೋಲ್, ಡಿಸೈಲ್, ವಿದ್ಯುತ್ ವ್ಯಯಿಸಲಾಗುತ್ತಿದೆ. ಪರಿಣಾಮವಾಗಿ, ಜಲಾಶಯ ಬರಿದಾಗಿ ರಬಿ ಬೆಳೆಯೂ ನಾಶವಾಗುವ ಅಪಾಯವಿದೆ!

ಆಂಧ್ರ ಪ್ರದೇಶ 17 ಜಿಲ್ಲೆಗಳು ಬರಗಾಲ ಪೀಡಿತವಾಗಿವೆ. ಮಳೆಯ ಅಭಾವದಿಂದ ಶೇ.70 ರಷ್ಟು ವ್ಯವಸಾಯ ಭೂಮಿಯಲ್ಲಿ ಬಿತ್ತನೆಯಾಗಲಿಲ್ಲ. ಆಹಾರದ ಕಣಜವಾದ ರಾಯಲ ಸೀಮೆ ಜಿಲ್ಲೆಯು ಭಾರೀ ನಷ್ಟಕ್ಕೊಳಗಾಗಿದೆ.

ಒರಿಸ್ಸಾದಲ್ಲಿ ಬರಗಾಲ ಭಾದೆಯಿಂದ ಹಸಿವು ನೀರಡಿಕೆಗಳಿಂದ ಈಗಾಗಲೇ 500 ಜನರು ಸತ್ತಿರುವುದಾಗಿ ತಿಳಿದು ಬಂದಿದೆ ! ಸತ್ತವರಲ್ಲಿ ಈ ರಾಜ್ಯದ ಅತ್ಯಂತ ಹಿಂದುಳಿದ ಕೋರಾ ಪ್ರತ್ ಮತ್ತು ಕಾಲಾಹಂಡಿ ಜಿಲ್ಲೆಗಳ ಬುಡಕಟ್ಟು ಜನಾಂಗಗಳ ಮಕ್ಕಳೂ ಮುದುಕರೂ ಹೆಚ್ಚಾಗಿದ್ದಾರೆ. ಈ ಪ್ರದೇಶಗಳ ತೀವ್ರ ದುಃಸ್ಥಿತಿ, ಬಡ ಜನರ ದಾರುಣಸ್ಥಿತಿ,ಹಸಿವು ನೀರಡಿಳಿಕೆಗಳಿಂದ ಸಾವು ನೋವು, ಪರಿಹಾರ ಕಾರ್ಯಗಳಲ್ಲಿ ವಿಳಂಬ ಹಾಗೂ ಭ್ರಷ್ಟಾಚಾರ, ಶ್ರಿಮಂತ ವರ್ಗ ದವರಿಂದ ದಬ್ಬಾಳಿಕೆ ಶೋಷಣೆ, ಇತ್ಯಾದಿ ವಿಷಯಗಳ ಮೇಲೆ ರಾಷ್ಟ್ರೀಯ ಪತ್ರಿಕೆಗಳಲ್ಲೂ, ರಾಜ್ಯ ವಿಧಾನ ಸಭೆ ಹಾಗೂ ಸಂಸತ್ತಿನ ಚರ್ಚೆಗಳಲ್ಲೂ, ನ್ಯಾಯಾಂಗ ತನಿಖೆಗಳಲ್ಲೂ, ನಾಗರೀಕ ಸಮಿತಿಗಳ ವೇದಿಕೆಗಳಲ್ಲೂ ವಿವರವಾಗಿ ಪ್ರಸ್ತಾಪಿಸಲಾಗಿದೆ. ಆದರೆ, ಅನೇಕ ಭ್ರಷ್ಟಾಚಾರಗಳ ಆಪಾದನೆ ಹೊತ್ತ ರಾಜ್ಯ ಮುಖ್ಯಮಂತ್ರಿ ಜೆ.ಬಿ. ಪಟ್ನಾಯಕ್ ಬರಗಾಲದ ಭೀಕರ ವಿದ್ಯಾಮಾನಗಳನ್ನು ಘಂಟಾಘೋಷವಾಗಿ ಅಲ್ಲಗಳೆದಿದ್ದಾರೆ. ಇವೆಲ್ಲ ವಿರೋಧ ಪಕ್ಷಗಳ ಅಪಪ್ರಚಾರಗಳೆಂದಿದ್ದಾರೆ ! ಇತ್ತೀಚೆಗೆ, ಆ ರಾಜ್ಯದ ವಿಧಾನ ಸಭಾಧ್ಯಕ್ಷರ ನೇತೃತ್ವದ ಅಧ್ಯಯನ ತಂಡವೂ, ಕೆಲವು ಕಾಂಗ್ರೈ ವಿಧಾನ ಸಭಾ ಸದಸ್ಯರೂ ಬರಗಾಲದ ಭೀಕರ ಪರಿಸ್ಥಿತಿಯನ್ನು ರುಜುವಾತು ಗೊಳಿಸಿ ಮುಖ್ಯ ಮಂತ್ರಿಯವರ ದಿವ್ಯ ಅಲಕ್ಷ್ಯವನ್ನು ಬಯಲು ಗೊಳಿಸಿದ್ದಾರೆ. ರಾಜ್ಯ ಸರ್ಕಾರವು ಕೇಂದ್ರದಿಂದ ಬರಗಾಲ ಪರಿಹಾರ ಪಡೆಯಲು ವಿಳಂಬ ಮಾಡಿದುದಕ್ಕೂ, ಹಿಂದೆ ನೆರೆ ಹಾವಳಿ ಪರಿಹಾರದ ಹಣವನ್ನು ರಾಜಧಾನಿ ಭುವನೇಶ್ವರವನ್ನು ಸುಂದರ ಗೊಳಿಸುವಂತಹ ಅನೇಕ ಅನಗತ್ಯ ವಿಷಯಗಳಿಗೆ ವಿನಿಯೋಗಿಸಿದುದನ್ನು ಪತ್ರಿಕೆಗಳು ಕ್ರಮವಾಗಿ ಟೀಕಿಸಿವೆ. (ಉದಾ : ಇಂಡಿಯನ್ ಎಕ್ಸ್‌ಪ್ರೆಸ್, ಸಂಪಾದಕೀಯ : 27.8.87; ದಿಇಲ್ಲೆಸ್ಟ್ರೇಟೆಡ್ ವೀಕ್ಲಿ : 23.8.87)

ಕುಡಿಯುವ ನೀರಿನ ಅಭಾವ

ಬರಗಾಲ ಪೀಡಿತ ಪ್ರದೇಶಗಳ ಜನರ ಏಕೈಕದೊಡ್ಡ ಸಮಸ್ಯೆಕುಡಿಯವನೀರಿನ ಅಭಾವ. 1.6 ಕಿ ಮೀ. ದೂರದೊಳಗೆ ಜನರಿಗೆ ಸ್ವಚ್ಛ ಕುಡಿಯುವ ನೀರನ್ನು ಒದಗಿಸಬೇಕೆಂದು ಸರಕಾರ ಬಹಳ ವರ್ಷಗಳ ಹಿಂದೆಯೇ ಘೋಷಿಸಿದ್ದರೂ, 1985ರಲ್ಲಿಯೂ ದೇಶದ ಒಟ್ಟು 5,75,000 ಹಳ್ಳಿಗಳಲ್ಲಿ 2,30,000 ಹಳ್ಳಿಗಳಲ್ಲಿ 250 ಜನರಿಗೆ ಸರಾಸರಿ ಕುಡಿಯುವ ನೀರಿನ ಒಂದು ಆಶ್ರಯವೂ ಇಲ್ಲ ಎಂದು ತಿಳಿದು ಬಂದಿದೆ. ಏಳನೇ ಯೋಜನೆಯ (1985-90) ಅಂತ್ಯದೊಳಗೆ ಈ ಸಮಸ್ಯೆಯ ಹಳ್ಳಿಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವೆಂದು ಆಶಿಸಲಾಗಿದೆ.ಆದರೆ, ಇದುವರೆಗಿನ ಅನುಭವದಂತೆ,ಉದ್ದೇಶಿತ ಗುರಿಗೂ ನಿಜವಾದ ಸಾಧನೆಗೂ ಬಹಳ ಅಂತರ ಮುಂದುವರಿಯಲಿದೆ. (ಸುಭಾಸ್‌ರೇ, ಪೀಪಲ್ಸ್ ಡೆಮಾಕ್ರಸಿ: 9.8.87)

ನೀರಾವರಿ ಸೌಕರ್ಯದ ಅಭಾವ

ಆರೇಳು ಪಂಚವಾರ್ಷಿಕ ಯೋಜನೆಗಳ ನಂತರವೂ ಒಟ್ಟು ವ್ಯವಸಾಯಭೂಮಿಯ ಶೇ. 27ರಷ್ಟು ಮಾತ್ರಭೂಭಾಗವು ನೀರಾವರಿ ಸೌಕರ್ಯ ಹೊಂದಿದೆ. ಇತರ ಪ್ರದೇಶಗಳು ಮಳೆಯ ಕೃಪಾಕಟಾಕ್ಷದಲ್ಲಿರಬೇಕಾಗುವುದು. ಸದ್ಯ ದೊರಕ ಬಹುದಾದ ನೀರಾವರಿ ಸೌಕರ್ಯಗಳನ್ನೂ ಗರಿಷ್ಟ ಮಟ್ಟದಲ್ಲಿ ಬಳಸಲಾಗುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲಿಕರ, ಶ್ರೀಮಂತ ರೈತರ ಮತ್ತು ಅವರ ವರ್ಚಸ್ಸಿನಲ್ಲಿರುವ ಉನ್ನತ ಅಧಿಕಾರಿಗಳ ಆಶ್ರಯದಲ್ಲಿರುವ ಈ ನೀರಾವರಿ ಸೌಕರ್ಯಗಳು ಮಧ್ಯಮ ರೈತರಿಗೆ, ಬಡರೈತರಿಗೆ ಸಿಗುವುದಿಲ್ಲ. ತೂತುಬಾವಿಗಳೂ ಹೆಚ್ಚಾಗಿ ಖಾಸಗೀ ಸ್ವಾಮ್ಯದಲ್ಲಿರುವುದರಿಂದ ಬಡವರಿಗೆ ಅವುಗಳ ಪ್ರಯೋಜನ ಸಿಗುತ್ತಿಲ್ಲ. ಭೂಮಾಲಿಕರ, ಶ್ರಿಮಂತ ರೈತರ ಲಾಭದಾಹದಿಂದಾಗಿ ಅತ್ಯಮೂಲ್ಯವಾದ ಭೂಗರ್ಭದಲ್ಲಿರುವ ಜಲಾಶಯ ಬರಿದಾಗುತ್ತಿದೆ. ಪ್ರಸಕ್ತ ಬರಗಾಲಕ್ಕೆ ಇದು ಕೂಡಾ ಪ್ರಬಲ ಕಾರಣ.

ತುರ್ತು ಪರಿಹಾರ

ಬರಗಾಲದ ದುಷ್ಪರಿಣಾಮಗಳು ವಿಷವರ್ತುಲವಾಗಿ ಒಂದಕ್ಕೊಂದು ಬೆಸೆದುಕೊಂಡಿವೆ. ನೀರು, ಆಹಾರ ಧಾನ್ಯ, ತರಕಾರಿ, ಹಾಲು, ಮೇವುಗಳ ಕೊರತೆ; ಅಕ್ರಮ ಸಂಗ್ರಹ, ಕಾಳಸಂತೆ

[6ನೇ ಪುಟ ನೋಡಿ]

ಬರಗಾಲ: ಶ್ರೀಮಂತರಿಗೆ ವರದಾನ !

ಬರಗಾಲದಿಂದ ಕೃಷಿ ಉತ್ಪಾದನೆ ಶೇ.20ರಷ್ಟು ಕಡಿಮೆ ಆದರೆ:
-ಶೇ. 3.6 ರಷ್ಟು ರಾಷ್ಟ್ರೀಯ ಒಟ್ಟು ಉತ್ಪಾದನೆಯಲ್ಲಿ ಇಳಿಮುಖ.
-ಶೇ. 6.0ರಷ್ಟು ಖಾಸಗೀ ಬಂಡವಾಳ ಹೂಡುವಿಕೆಯಲ್ಲಿ ಇಳಿಮುಖ.
-ಶೇ. 16 0 ರಷ್ಟು ಆಹಾರ ಧಾನ್ಯಗಳ ಬೇಡಿಕೆಯಲ್ಲಿ ಇಳಿಮುಖ.
-ಶೇ. 9.0ರಷ್ಟು ದೈನಂದಿನದ ಜೀವನಾವಶ್ಯಕ ಕೈಗಾರಿಕಾ ಸಾಮಾಗ್ರಿಗಳ ಬೇಡಿಕೆಯಲ್ಲಿ ಇಳಿಮುಖ.
-ಶೇ. 7.0 ರಷ್ಟು ಸುಖ ಭೋಗದ ರಿಫ್ರಿಜೇಟರಿ, ದೂರದರ್ಶನ, ವಿಡಿಯೋ, ಬಟ್ಟೆ ಒಗೆಯುವ ಯಂತ್ರ, ಆಭರಣ ಇತ್ಯಾದಿ ಬಾಳಿಕೆಯ ಕೈಗಾರಿಕಾ ಸಾಮಗ್ರಿಗಳಿಗೆ ಶ್ರೀಮಂತರಿಂದ ಬೇಡಿಕೆಯಲ್ಲಿಹೆಚ್ಚಳ! ಬರಗಾಲದಲ್ಲಿ ಶ್ರೀಮಂತರು ಮಾತ್ರ ವ್ಯಾಪಾರಿಗಳು, ಶೀಮಂತ ರೈತರು ಬಂಡವಾಳಶಾಹಿಗಳು ಮಾತ್ರ ಲಾಭ ಪಡೆಯುತ್ತಾರೆ. ಯುದ್ಧ, ನೆರೆ ಪರಿಸ್ಥಿತಿಗಳಂತೆಯೇ ಬರಗಾಲ ಅವರಿಗೆ ವರದಾನವಾಗಿದೆ!

(ಭಾರತೀಯ ಸಂಖ್ಯಾ ಸಂಸ್ಥೆ, ದೆಹಲಿ : ಇಂಡಿಯನ್ ಎಕ್ಸ್ ಪ್ರೆಸ್ :27.8.87)

ಬರಗಾಲ ಪರಿಹಾರ : ಲೋಕೋಪಯೋಗಿ ಕೆಲಸ ಕಾರ್ಯಗಳಿಂದ

★ 2000 ವರ್ಷಗಳ ಹಿಂದೆ ಚಂದ್ರಗುಪ್ತ ಮೌರ್ಯನ ಆಳ್ವಿಕೆಯಲ್ಲಿಯೂ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರಗಾಲ ಬಂದಾಗ ಗ್ರಾಮೀಣ ಜನರಿಗೆ ಕೋಟೆ ಕಟ್ಟುವುದು, ಅರಮನೆ ಕಟ್ಟುವುದು, ರಸ್ತೆ ನಿರ್ಮಾಣ, ನೀರಾವರಿ ಯೋಜನೆಗಳ ಕಾರ್ಯ-ಧರ್ಮ ಶಾಲೆ ಕಟ್ಟುವುದು, ಇತ್ಯಾದಿ ಲೋಕೋಪಯೋಗಿ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಲಹೆ ಮಾಡಲಾಗಿತ್ತು.

★ 1880 ರಲ್ಲಿ ಬ್ರಿಟಿಷ್ ಭಾರತದಲ್ಲಿಯೂ ಬರಗಾಲ ತನಿಖಾ ಆಯೋಗವು. ಬರಗಾಲ ಪರಿಸ್ಥಿತಿಯಲ್ಲಿ ಆಹಾರ ಧಾನ್ಯಗಳ ಕೊರತೆಗಿಂತಲೂ ಅವುಗಳನ್ನು ಕೊಂಡುಕೊಳ್ಳಲು ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವುದು ಮುಖ್ಯವಾಗಿವೆ ಎಂದು ತಿಳಿಸಿದೆ.

★ ಈಗ ಕೂಡ ಸಿ.ಪಿ.ಐ. (ಎಂ) ನ ಒತ್ತಾಯವೂ ಅದೇ.

ದೇಶ ಎದುರಿಸುತ್ತಿರುವ ಬರಗಾಲಕ್ಕೆ ಪರಿಹಾರ ಇಲ್ಲವೇ ?

"ಆಧುನಿಕ ರಾಷ್ಟ್ರ ನಿರ್ಮಾಣದ ಮಹಾನ್ ಪ್ರಯತ್ನಕ್ಕಾಗಿ ನಾವು ನಮ್ಮನ್ನು ಪುತ್ತೆ ಸಮರ್ಪಿಸಿಕೊಳ್ಳುತ್ತಿದ್ದೇವೆ" ಎಂದು ಸಾರಿದವರು ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರು, ಆಗಸ್ಟ್ 10ರಂದು ನಲವತ್ತನೆಯ ಸ್ವಾತಂತ್ರೋತ್ಸವದ ಸ್ಮರಣಾರ್ಥ ನಡೆದ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ. ಅದೇ ಉಸುರಿನಲ್ಲಿ ಮತ್ತೊಂದು ಮಾತನ್ನು ಹೇಳಿದರು. "ದೇಶದ ಅನೇಕ ಭಾಗಗಳಲ್ಲಿ ತಲೆ ದೋರಿರುವ ಬರಗಾಲ ಪರಿಸ್ಥಿತಿಯು ಈಗ ನಮ್ಮ ಮುಂದಿರುವ ದೊಡ್ಡ ಸವಾಲಾಗಿದೆ. ದೇಶಕ್ಕೆ ಸವಾಲಾಗಿರುವ ಬರ ಪರಿಸ್ಥಿತಿ ಎದುರಿಸಲು ನಾವು ಸಿದ್ಧರಾಗಿದ್ದೇವೆಂದೂ ಕುಡಿಯುವ ನೀರು, ಕೆಲಸ ಆಹಾರ ಮತ್ತು ಜಾನುವಾರುಗಳಿಗೆ ಮೇವು ಒದಗಿಸುತ್ತೇವೆಂದೂ ಸಾರಿದರು. ಆದರೆ ದೇಶದ ಒಂದಿಲ್ಲೊಂದು ಪ್ರದೇಶದಲ್ಲಿ ಪ್ರತಿವರ್ಷ ಕಾಡುತ್ತಿರುವ ಬರಗಳಿಗೆ ಎಂಥ ಶಾಶ್ವತ ಪರಿಹಾರ ಕೈಗೊಳ್ಳುತ್ತವೆಂಬುದನ್ನು ಮಾತ್ರ ವಿವರಿಸಲಿಲ್ಲ.

ಅನಾವೃಷ್ಟಿ ಪರಿಣಾಮದಿಂದಾಗಿ ಬೆಲೆಗಳಲ್ಲಿ ಏರಿಕೆಯಾಗಿತ್ತೆಂದು ಲೋಕಸಭೆಯಲ್ಲಿ ಒಪ್ಪಿಕೊಳ್ಳಲಾಯಿತು. ಏಪ್ರಿಲ್-ಜುಲೈ ಅವಧಿಯಲ್ಲಿ ಆಹಾರ ಧಾನ್ಯಗಳ ಬೆಲೆಗಳು ಶೇ 7.5 ರಷ್ಟು ದ್ವಿದಳ ಧಾನ್ಯದ ಬೆಲೆ ಶೇ.7 ರಷ್ಟು ಹೆಚ್ಚಾಗಿರುವೆಯಂತೆ. 1987-88 ರ ಆರ್ಥಿಕ ವರ್ಷದ ಮೊದಲ 4 ತಿಂಗಳಲ್ಲಿ ದ್ವಿದಳ ಧಾನ್ಯಗಳ ಒಟ್ಟು ಬೆಲೆಯಲ್ಲಿ ಶೇ. 15.3 ರಷ್ಟು (ಹೋದ ವರ್ಷ 9.4ರಷ್ಟು) ಆಹಾರ ಧಾನ್ಯಗಳ ಬೆಲೆ ಶೇ. 5.1 ರಷ್ಟು (ಹಿಂದಿನ ವರ್ಷದ 1 ರಷ್ಟು), ಸಾಂಬಾರ ಪದಾರ್ಥಗಳ ಬೆಲೆ 14.2ರಷ್ಟು (ಹಿಂದಿನ ವರ್ಷ 12.4 ರಷ್ಟು), ಖಂಡಸಾರಿ ಸಕ್ಕರೆ ಮತ್ತು ಬೆಲ್ಲದ ಬೆಲೆ ಶೇ. 14.3ರಷ್ಟು, ಖಾದ್ಯತೈಲ ಶೇ.21.1ರಷ್ಟು ಎಣ್ಣೆ ಹಿಂಡಿ ಶೇ. 22.2ರಷ್ಟು ಹೆಚ್ಚಿದೆಂದು ಸರ್ಕಾರದ ಹೇಳಿಕೆ. ಸರಕಾರದ ಈ ಹೇಳಿಕೆ ಸರಿಯಲ್ಲ. ವಾಸ್ತವವಾಗಿ ಗ್ರಾಹಕರ ಮೇಲೆ ಇದಕ್ಕಿಂತಲೂ ಇಮ್ಮಡಿ ಭಾರ ಬಿದ್ದಿದೆ. ವಸ್ತುಗಳು ದುಬಾರಿಯಾಗಿವೆ.

ಮಳೆಯ ಅಭಾವದಿಂದಾಗಿ ದಕ್ಷಿಣ ರಾಜ್ಯಗಳ ವಿದ್ಯುತ್ ಕ್ಷಾಮ ಎದುರಿಸಬೇಕಾಗಿ ಬಂದಿದೆ ಎಂದು ದಕ್ಷಿಣ ರಾಜ್ಯಗಳ ವಿದ್ಯುತ್ ಮಂಡಳಿಗಳ ಅಧ್ಯಕ್ಷರುಗಳು ತಾ. 19ರಂದು ಸಭೆ ಸೇರಿ ಎಚ್ಚರಿಕೆ ನೀಡಿದ್ದಾರೆ.

ಈ ವರ್ಷದ ಅಂದರೆ–ಮಳೆ ವೈಫಲ್ಯ, ಬರಗಾಲದ ಭೀತಿಯ ವರ್ಷ–ಬೆಳೆ ಉತ್ಪಾದನೆಯ ಅಂದಾಜು ನಷ್ಟವನ್ನು ತಿಳಿಸಲು ಅಧಿಕೃತ ಮೂಲಗಳು ನಿರಾಕರಿಸಿವೆಯಾದರೂ, ಸರ್ಕಾರಿ ಅಂಕೆ ಸಂಖ್ಯೆಯ ಪ್ರಕಾರ ಪ್ರಸಕ್ತ ಖರೀಫ್ ಬೆಳೆಯ ನಷ್ಟ2000 ಕೋಟಿ ರೂಪಾಯಿ ಮೌಲ್ಯದ್ದಾಗಿದೆ.

ರಾಜ್ಯದ ಪ್ರಮುಖ ಜಲಾಶಯಗಳಾದ ಕೃಷ್ಣರಾಜ ಸಾಗರ, ಹೇಮಾವತಿ ಮತ್ತು ಹಾರಂಗಿ ಆಣೆಕಟ್ಟುಗಳಲ್ಲಿ ನೀರಿನಮಟ್ಟವು ತೀರಾ ಕಡಿಮೆಯಾಗಿರುವುದರಿಂದ ನೀರಾವರಿಗೆ ನೀರು ಪೂರೈಸಲು ಸಾಧ್ಯವಿಲ್ಲೆಂದು ಲೋಕೋಪಯೋಗಿ ಸಚಿವ ದೇವೇಗೌಡರ ಹೇಳಿಕೆ. ಭದ್ರಾ ಜಲಾಶಯದ ಎಡ–ಬಲ ದಂಡೆಗಳ ನೀರು ಪೂರೈಕೆ ಸ್ಥಗಿತ ಯಾಕೆಂದರೆ ಭದ್ರಾ ಜಲಾಶಯದ ಪ್ರದೇಶದಲ್ಲಿ ಸಾಕಷ್ಟು ಮಳೆಯಿಲ್ಲ.

ಭೀಕರ ವಿದ್ಯುತ್ ಕ್ಷಾಮದ ಪರಿಣಾಮವಾಗಿ ರಾಜ್ಯದ ಕೆಲವು ಬೃಹತ್ ಉದ್ಯಮಗಳ ಕೆಲಸವನ್ನು ಸ್ಥಗಿತಗೊಳಿಸಬೇಕಾಗಿ ಬರುವ ಸಂಭವ ಈಗ ನಿಚ್ಚಳವಾಗಿ ಕಂಡು ಬಂದಿದೆ. ರಾಜ್ಯದಲ್ಲಿ ಒಟ್ಟು ಬಳಕೆಯಾಗುವ 310 ಲಕ್ಷ ಯೂನಿಟ್‌ಗಳಲ್ಲಿ ಅರ್ಧದಷ್ಟನ್ನು ರಾಜ್ಯದ 14 ಉದ್ಯಮಗಳು ಕಬಳಿಸುತ್ತಿವೆ. ಕೃಷಿ ಪಂಪ್ ಸೆಟ್‌ಗಳಿಗೂ "ವಿದ್ಯುಚ್ಛಕ್ತಿ ರೇಶನಿಂಗ್" ಜಾರಿಗೆ ತರ ಬೇಕಾದೀತು ವಿದ್ಯುತ್ ಸಚಿವ ಜೆ.ಎಚ್. ಪಟೇಲರ ಎಚ್ಚರಿಕೆ.

ದೇಶ ಸ್ವಾತಂತ್ರ್ಯ ಪಡೆದ ನಾಲ್ವತ್ತನೇ ವರ್ಷ ಜನತೆಗೆ ಕೊಡ ಮಾಡಿದ್ದೇನು? ಬರಗಾಲ, ಮಳೆಯ ಅಭಾವ, ವಿದ್ಯುತ್ ಕಡಿತ, ಬೆಲೆ ಏರಿಕೆ, ಕಾರ್ಖಾನೆಗಳ ಮುಚ್ಚುವಿಕೆ, ನಿರುದ್ಯೋಗದಲ್ಲಿ ಹೆಚ್ಚಳ.

ಬರಗಾಲದ ಪರಿಹಾರಕ್ಕಾಗಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಏನು ಮಾಡಲು ಸಾಧ್ಯ ಎಂದು ಕಾಂ. ಎನ್. ಕೆ. ವಿಶ್ಲೇಷಣೆ ಮಾಡಿದ್ದಾರೆ.

ಹಿರೇಬಂಡವಾಳದಾರರ ಮುಖಂಡತ್ವದಲ್ಲಿರುವ ಬಂಡವಾಳದಾರ ಭೂಮಾಲಕ ವರ್ಗದ ಕಾಂಗ್ರೆಸ್ ಸರ್ಕಾರ ಕಳೆದ 40 ವರ್ಷಗಳಲ್ಲಿ, ತನ್ನ ಪಕ್ಷಕ್ಕೆ ಅಧಿಕಾರ ಹಸ್ತಾಂತರಿಸಲ್ಪಟ್ಟ ಅಷ್ಟು ದೀರ್ಘ ಕಾಲದಲ್ಲಿ ದೇಶದ ಬೆಳವಣಿಗೆಗೆ, ಜನರಿಗೆ ಅತ್ಯಾವಶ್ಯಕ ಬೇಕಾಗಿರುವ ಪರಿಸರ ರಕ್ಷಣೆ,ಅರಣ್ಯ ಬೆಳವಣಿಗೆ, ವಿದ್ಯುತ್ ಉತ್ಪಾದನೆ, ನೀರಾವರಿ ಯೋಜನೆಗಳಿಗೆ ಪ್ರಾಧಾನ್ಯತೆ ಕೊಡುವುದರಲ್ಲಿ ಸಂಪೂರ್ಣ ವಿಫಲಗೊಂಡಿದೆ. ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಹೇಳಿದಂತೆ ಕೇಂದ್ರ ಸರ್ಕಾರಕ್ಕೆ ದೇಶದ ಅಭಿವೃದ್ಧಿ ಕುರಿತಾಗಲೀ, ಜನತೆಯ ಅವಶ್ಯಕತೆಯ ವಿಷಯದಲ್ಲಾಗಲೀ ನಿರ್ದಿಷ್ಟ ನಿರೂಪಣೆಯಿಲ್ಲ ಪಂಚವಾರ್ಷಿಕ ಯೋಜನೆಗಳು ಜನಪರವಾಗಿಲ್ಲ. ಆ ಯೋಜನೆಗಳಲ್ಲಿ ಜನರ ನೇರ ಸಹಯೋಗವಿಲ್ಲ. ಈ ಕಾರಣದಿಂದಲೇ ದೇಶ ಎದುರಿಸುತ್ತಿರುವ ಮೂಲ ಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಕೇಂದ್ರ ಸರ್ಕಾರ ವಿಫಲಗೊಂಡಿದೆಂದು ಆರೋಪಿಸಿದ್ದಾರೆ ಅದು ಕಟು ಸತ್ಯ.

ನಮ್ಮ ರಾಜ್ಯದ ಒಂದೆರಡು ಉದಾಹರಣೆ ಹೀಗಿವೆ. 1977 ರಿಂದ 1987 ರ ವರೆಗೆ ನಮ್ಮ ರಾಜ್ಯದಲ್ಲಿ 5–6 ವರ್ಷ ಕ್ಷಾಮ ಪರಿಸ್ಥಿತಿ. ಲಕ್ಷ ಲಕ್ಷ ರೈತರು ತೆಗೆದುಕೊಂಡ ಸಾಲದ ಮರುಪಾವತಿ ಮಾಡಲಾರದ ಪರಿಸ್ಥಿತಿಯಲ್ಲಿದ್ದಾರೆ. ಯಾಕೆ? ಮಳೆ ಸರಿಯಾಗಿ ಬಾರದಿರಲು ಅರಣ್ಯದ ಕೊರತೆಯೂ ಒಂದು.ವನ ಮಹೋತ್ಸವ ಪ್ರಾರಂಭವಾಗಿ ನಾಲ್ಕು ದಶಕಗಳಾದವು. ಆದರೆ ಅರಣ್ಯ ಎಷ್ಟು ಬೆಳೆದಿದೆ? ಕರ್ನಾಟಕದಲ್ಲಿ ಅರಣ್ಯ ಒಂದು ನೂರಕ್ಕಿಂತಲೂ ಹೆಚ್ಚು ಪ್ರದೇಶದಲ್ಲಿ ಬೋಳಾಗಿದೆ. ನಾಶವಾಗಿದೆಂದು ಒಂದು ಅಭಿಪ್ರಾಯ ಅದು ನಿಜ ಇರಬಹುದು. ಆರಣ್ಯ ಬೆಳೆಸುವ ಪ್ರವೃತ್ತಿಯಿಲ್ಲ. ಕಾಗದಕಾರ್ಖಾನೆಯವರಿಗೆ ಕೊಟ್ಟಿರುವುದರಿಂದ ಅವರು ನೈಸರ್ಗಿಕವಾಗಿ ಬೆಳೆದಿರುವ ಗಿಡಗಳನ್ನೆಲ್ಲ ಕಡಿದು ತಮಗೆ ಬೇಕಾದ ಸಸ್ಯಗಳನ್ನು ಬೆಳೆಸುತ್ತಿದ್ದಾರೆ. 8–10 ವರ್ಷಕ್ಕೊಮ್ಮೆ ಅವುಗಳನ್ನು ಕಡಿಯುತ್ತಾರೆ.ಅರಣ್ಯ ಬೋಳುಮಾಡುತ್ತಾರೆ. ಮತ್ತೆ ಗಿಡ ನೆಡುತ್ತಾರೆ. ಆದರಿಂದಾಗಿ ಭೂಮಿ ನೆಡುವಾಗುತ್ತದೆ. ಮಳೆಗಾಲದಲ್ಲಿ ಮಣ್ಣು ಹರಿಯುತ್ತದೆ. ನೇತ್ರಾವತಿ ಜಲಾಶಯದಲ್ಲಿ ಹೂಳು ತುಂಬುತ್ತದೆ. ನೀರು ಶೇಖರಣೆ ಕಡಿಮೆಯಾಗುತ್ತದೆ. ವಿದ್ಯುತ್ ಉತ್ಪಾದನೆಗೂ, ರೈತರ ಭೂಮಿಗೂ ನೀರಿನ ಅಭಾವ ಉಂಟಾಗುತ್ತದೆ. ಆದ್ದರಿಂದ ಭೂಸಾರ ಸಂರಕ್ಷಣೆ ಅತ್ಯಗತ್ಯ.

ನಮ್ಮ ಸರಕಾರ ಸಮತಾವಾದಿ ದೇಶಗಳಿಂದ ಪಾಠ ಕಲಿಯುವುದಿಲ್ಲ. ಚೀನಾ ದೇಶದಲ್ಲಿ ಹರಿಯುತ್ತಿರುವ ನದಿಗಳ ಎರಡು ದಂಡೆಗಳಲ್ಲೂ ಮರ ಬೆಳೆಸಿ ನದಿಗಳು ದಿಕ್ಕು ಬದಲಾಯಿಸುವುದನ್ನು,ಅವರೆಗಳ ವಿಸ್ತಾರಗೊಳ್ಳುವುದನ್ನು, ಮಣ್ಣು ಕುಸಿದು ಹೂಳು ತುಂಬುತ್ತಿರುವುದನ್ನು ತಪ್ಪಿಸುತ್ತಾರೆ. ಹಾಗೆಯೇ ಮಳೆಗಾಲದಲ್ಲಿ ನದಿಯ ಆಳ ಉಳಿಸುವ ದೃಷ್ಟಿಯಿಂದ,ಹೂಳು ತುಂಬಲಾರದಂತೆ ಮಾಡಲು, ನದಿ ನೀರನ್ನು ಯಂತ್ರಗಳಿಂದ ಕಲಕಿ ರಾಡಿ (ಮಣ್ಣು ಕಲಕಿದ ನೀರು) ನೀರನ್ನು ವೇಗಲಕ್ಕೆತ್ತಿ ಹೊಲಗಳಿಗೆ ಬಿಡುತ್ತಾರೆ. ಇದರಿಂದ ಎರಡು ದೃಷ್ಟಿಯಲ್ಲಿ ಲಾಭವಾಗುತ್ತದೆ. ನದಿಯ ಹೂಳು ತೆಗೆದಂತಾಗುವುದಲ್ಲದೆ, ಹೊಲಕ್ಕೆ ಉತ್ತಮ ಫಲದಾಯಕ ಮಣ್ಣು ಸಿಕ್ಕಂತಾಗುತ್ತದೆ.

ಈ ಯೋಜನೆಗಳಿಗೆ ಹಣವೆಲ್ಲಿ ಎಂದು ಕೇಳುವವರಿದ್ದಾರೆ. ಕೇಂದ್ರ ಸರಕಾರ ಕೈ ಗೊಳ್ಳಬೇಕಾದ ಯೋಜನೆಗಳಿವು. ಕಳೆದ 40 ವರ್ಷಗಳಿಂದ ಕೇಂದ್ರ–ರಾಜ್ಯ ಸರಕಾರಗಳು ಬರ ಪರಿಹಾರಕ್ಕೆ ಖರ್ಚು ಮಾಡಿದ ಹಣ ಕೆಲವು ಸಾವಿರ ಕೋಟಿ ರೂಪಾಯಿಗಳನ್ನು ಮೀರಿದೆ. ಪ್ರತಿ ವರ್ಷ ಸಾವಿರಾರು ಕೋಟಿ ಖರ್ಚಾಗುತ್ತಲೇ ಇದೆ. ಅದು ಬರಗಾಲಕ್ಕೆ ನೆರೆ ಹಾವಳಿಗೆ ಒಂದು ಸಮಗ್ರ ನೀರಾವರಿ ಯೋಜನೆ ರೂಪಿಸಿದ್ದಾದರೆ ಈ ಎರಡು ಸಮಸ್ಯೆಗಳ ಪರಿಹಾರಕ್ಕೆ ಮಾಡುವ ಖರ್ಚನ್ನು ಸದುಪಯೋಗ ಪಡಿಸಿ ಕೊಳ್ಳಬಹುದು. ಯೋಜನಾ ಆಯೋಗ ಹಾಗೆಯೇ ಮುಖ್ಯಮಂತ್ರಿಗಳ ಸಭೆಗಳಲ್ಲಿ ಜ್ಯೋತಿ ಬಸು, ಇ.ಕೆ.ನಯನಾರ್, ನೃಪೇನ್ ಚಕ್ರವರ್ತಿ ಮೊದಲಾದವರೆಲ್ಲ ದೇಶದ ಸಂಪತ್ತು ಅಭಿವೃದ್ಧಿಗೆ ಜನ ಕಲ್ಯಾಣಕ್ಕೆ ವ್ಯಯವಾಗಬೇಕು, ಜನ ಪರವಾದ ಯೋಜನೆಗಳನ್ನು ರೂಪಿಸಿ, ಕಾರ್ಯರೂಪದಲ್ಲಿ ತರಬೇಕೆಂದು ಒತ್ತಾಯಿಸುತ್ತಿರುವುದು ಆ ಕಾರಣದಿಂದಲೇ ಇವರ ಅಭಿಪ್ರಾಯಗಳು ಜನರಮಧ್ಯೆ ಹೋಗಬೇಕು. ರಾಮಕೃಷ್ಣಹೆಗಡೆಗೂ, ರಾಜೀವಗಾಂಧಿಗೂ ಜ್ಯೋತಿಬಸು ಹೇಳುವ ಮಾತಿನ ಅರ್ಥವಾಗುವಂತೆ ಮಾಡಬೇಕು. ●

"ಬರಗಾಲದ ಉರಿ ಉದಯಪುರವನ್ನು ಸುಡುತ್ತಿದೆ"

– ಉದಯ

ಇಡೀ ದೇಶ ಇಂದು ಬರಗಾಲದ ಬೆಂಕಿಯಲ್ಲಿ ಬೇಯುತ್ತಿದೆ. ಹದಿನಾರು ರಾಜ್ಯಗಳು ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕ್ಷಾಮದ ಭೂತ ನೃತ್ಯ ಭೀಕರ ಸ್ವರೂಪ ತಾಳುತ್ತಿದೆ. ಮಳೆಯನ್ನೇ ನಂಬಿಕೊಂಡ ಮಣ್ಣಿನ ಮಕ್ಕಳು ಹಿಡಿಕೂಳಿಗಾಗಿ ಹಾಹಾಕಾರ ನಡೆಸುತ್ತಿದ್ದಾರೆ. ಹಸಿವನ್ನು ಹಿಂಗಿಸಿಕೊಳ್ಳಲು ತಿನ್ನಬಾರದ್ದನ್ನೆಲ್ಲಾ ತಿಂದು ವಿವಿಧ ರೋಗಗಳಿಗೆ ತುತ್ತಾಗಿ ಸಾಯತೊಡಗಿದ್ದಾರೆ.

ಒರಿಸ್ಸಾದ ಕಾಲಹಂಡಿ, ಕೋರಾಪಟ್ ಜಿಲ್ಲೆಗಳಂತೆ ಆಂಧ್ರದ ಮಹಬೂಬ ನಗರ ಜಿಲ್ಲೆಯಂತೆ ತೀವ್ರ ಕ್ಷಾಮದ ದವಡೆಗಳು ರಾಜಸ್ಥಾನದ ಉದಯಪುರ ಜಿಲ್ಲೆಯ ರೈತಾಪಿ ಜನರನ್ನು ಅಗಿದು ತಿನ್ನತೊಡಗಿವೆ. ಹೊಟ್ಟೆಗಿಲ್ಲದ ಜನ ಪ್ರಾಣಿಗಳಂತೆ ಸಾಯುತ್ತಿದ್ದಾರೆ. ಪ್ರಾಣ ಉಳಿಸಿಕೊಳ್ಳಲು ಸತ್ತ ಪ್ರಾಣಿಗಳನ್ನೇ ತಿನ್ನುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಇಡೀ ಜಿಲ್ಲೆ ಸತತವಾದ ಬರಕ್ಕೆ ಒಳಗಾಗಿದೆ.

ಗುಡ್ಡ ಗಾಡು ಜನರೇ ಅಧಿಕ ಸಂಖ್ಯೆಯಲ್ಲಿರುವ ಉದಯಪುರ ಜಿಲ್ಲೆಗೆ ಸಿ.ಪಿ.ಐ.(ಎಂ) ಮತ್ತು ಕಿಸಾನ್ ಸಭಾದ ಮುಂಖಂಡರನ್ನೊಳಗೊಂಡ ತಂಡ ಇತ್ತೀಚೆಗೆ ಭೇಟಿ ನೀಡಿ ಅಲ್ಲಿಯ ದಾರುಣ ಸ್ಥಿತಿಯನ್ನು ವರದಿ ಮಾಡಿವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಆಶ್ವಾಸನೆಗಳೆಲ್ಲಾ ಹುಸಿಯಾಗಿ ಜಿಲ್ಲೆಯ ಆದಿವಾಸಿ ಮತ್ತಿತರ ರೈತಾಪಿ ಜನ ಕೂಳಿಲ್ಲದೆ ಕಂಗಾಲಾಗಿದ್ದಾರೆ. ಕಳೆದವರ್ಷದ ಬರ ಪರಿಹಾರ ಕಾಮಗಾರಿಯಲ್ಲಿಶೇ.10 ರಿಂದ ಶೇ.75ರಷ್ಟು ಮಂದಿಗೆ ಮಾತ್ರ ಕೆಲಸ ದೊರಕಿತ್ತು. ಕೆಲಸ ಒದಗಿಸುವ ನೆಪದಲ್ಲಿ ಹಳ್ಳಿಯ ಸರಪಂಚರೂ ಮತ್ತಿತ್ತ ಸಮಾಜ ವಿರೋಧಿ ಶಕ್ತಿಗಳೂ ಹಳ್ಳಿಗರ ಅಸಹಾಯಕತೆಯ ಲಾಭ ಪಡೆದು ನಿಷ್ಕರುಣೆಯಿಂದ ಅವರನ್ನು ಶೋಷಿಸುತ್ತಿದ್ದಾರೆ. ಅವರಲ್ಲಿರುವ ದನ ಕರುಗಳನ್ನು, ಆಡು ಕೋಳಿಗಳನ್ನು ದೋಚುವುದಷ್ಟೇ ಅಲ್ಲದೆ ಹೆಂಗಸರ ಮಾನ ಮರ್ಯಾದೆಗಳನ್ನು ಸೂರೆ ಮಾಡುತ್ತಿದ್ದಾರೆ. ಸರ್ಕಾರ 14 ರೂ ಕನಿಷ್ಠ ಕೂಲಿ ನಿಗದಿ ಮಾಡಿದ್ದರೂ ದೊರೆಯುತ್ತಿರುವುದು 9ರೂ.ಮಾತ್ರ. ಇದನ್ನು ಕೂಡ ಸಮಯಕ್ಕೆ ಸರಿಯಾಗಿ ಕೊಡಲಾಗುತ್ತಿಲ್ಲ, ಅಲ್ಲದೆ ಕೆಲಸಕ್ಕಾಗಿ ಹತ್ತಾರು ಮೈಲಿ ಹೋಗ ಬೇಕಾದ ಪರಿಸ್ಥಿತಿಯಿದೆ. ಉದ್ಯೋಗವಿಲ್ಲದವರ ಪಾಡು ಕರುಣಾಜನಕವಾಗಿದೆ. ಕಥೌರಿ ಪ್ರದೇಶದ ಆದಿವಾಸಿ ಗಂಡಸರೆಲ್ಲಾ ಕಳೆದ ವರ್ಷ ಅಲ್ಪ ಹಣಕ್ಕಾಗಿ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಿ ಕೊಂಡು ಬಿಟ್ಟಿದ್ದಾರೆ. ಈಗ ಮಾರಿಕೊಳ್ಳಲು ಅವರಲ್ಲೇನೂ ಉಳಿದಿಲ್ಲ. ಇವೆಷ್ಟೇ ಆ ಜಿಲ್ಲೆಯಾದ್ಯಂತ ಇವೆ.

ಇದರ ಪರಿಣಾಮ ಏನಾಗಿದೆಯೆಂದರೆ ಈ ಹತ ಭಾಗ್ಯ ಜನ ಈಗ ಕಳ್ಳತನ ಮತ್ತು ದರೋಡೆಗೆ ಇಳಿದಿದ್ದಾರೆ. ಮಳೆ ಬಾರದಿರುವುದು ಹಲವು ರೀತಿಯ ಮೂಢ ನಂಬಿಕೆಗಳನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿವೆ. ಕೋಟ್ರಾ ಎಂಬ ಪ್ರದೇಶದಲ್ಲಿ ಸೋನಿ ಎಂಬಕುಟುಂಬವೇ ಮಳೆ ಬಾರದಿರಲು ಕಾರಣವೆಂದು ಅಲ್ಲಿಯ ಜನ ತೀರ್ಮಾನಿಸಿದ್ದಾರೆ. ಸಮಾಜ ವಿರೋಧಿ ಶಕ್ತಿಗಳು ಅಲ್ಲಿಯ ಆದಿವಾಸಿಗಳನ್ನು ಈ ಕುಟುಂಬದ ವಿರುದ್ಧ ಎತ್ತಿಕಟ್ಟಿ ಈ ಕುಟುಂಬಕ್ಕೆ ಸೇರಿದ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಲು ಯತ್ನಿಸುತ್ತಿದ್ದಾರೆ. ಕೊಲಿಯಾರಿ ಎಂಬಲ್ಲಿ ಕೂಡ ಜವೇರಿಯ ಮಹಾಜನ ಎಂಬ ಕುಟುಂಬದ ಮೇಲೆ ಇದೇ ರೀತಿಯ ಆರೋಪಹೊರಿಸಿ ಅವರ ಸ್ವತ್ತನ್ನು ಲೂಟಿ ಮಾಡಲು ಯತ್ನಿಸಲಾಗಿದೆ. ಈ ಬರ ಪೀಡಿತ ಪ್ರದೇಶದಲ್ಲಿ ಲೂಟಿ ಮತ್ತು ದೊಂಬಿ ಯಾವುವೇ ಕ್ಷಣದಲ್ಲಾದರೂ ಭುಗಿಲೇಳಬಹುದು.

ಈ ಜಿಲ್ಲೆಯ ಹಸಿದ ಜನ ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುತ್ತಿದ್ದಾರೆ. ಬರ್ಲಿ, ಕುಂದಲ್, ಮಹರಿ, ಭೇರಿ, ಅಸಾವರ, ದೋಕಾರ್, ಜೇರ್, ಮೆಹದ್, ಮುಂಡ್ವಾಲ್ ಮುಂತಾದ ಅನೇಕ ಗ್ರಾಮಗಳಲ್ಲಿ ಇದು ಸಾಮಾನ್ಯ ದೃಶ್ಯವಾಗಿದೆ. ಹಸಿವು ಈಗಾಗಲೇ ಅನೇಕರನ್ನು ಬಲಿ ತೆಗೆದುಕೊಳ್ಳಲಾರಂಭಿಸಿದೆ. ರಾಜಸ್ಥಾನದ ರಾಜ್ಯ ಸರ್ಕಾರ ತನ್ನ ಒಳ ಜಗಳದಲ್ಲೇ ಮುಳುಗಿದೆ. ಸರ್ಕಾರ ಕೂಡಲೇ ಸರಿಯಾದ ಕ್ರಮ ಕೈಗೊಳ್ಳದಿದ್ದರೆ, ಉದಯಪುರ ಜಿಲ್ಲೆಯು ಮತ್ತೊಂದು ಕಾಲಹಂಡಿ

[6ನೇ ಪುಟ ನೋಡಿ]

ಎಸ್. ಎಫ್. ಐ. ಪ್ರಥಮ ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡರೇಷನ್ ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲೋಕು ಪ್ರಥಮ ಸಮ್ಮೇಳನ ಆಗಸ್ಟ್ 26 ರಂದು ನಡೆಯಿತು. ಸಮ್ಮೇಳನಕ್ಕೆ ಮುನ್ನ ನಡೆದ ಮೆರವಣಿಗೆಯಲ್ಲಿ ಗಮನಾರ್ಹ ಸಂಖ್ಯೆಯ ವಿದ್ಯಾರ್ಥಿನಿಯರನ್ನೊಳಗೊಂಡು 500 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಎಲ್.ಐ.ಸಿ. ಧಾರವಾಡ ವಿಭಾಗದ ಆಡಳಿತಾಧಿಕಾರಿಗಳಾದ ಶ್ರೀ ಎಸ್. ಆರ್. ಭಟ್ ಸಮ್ಮೇಳನ ಉದ್ಘಾಟಿಸಿದರು. ದುಡಿಯುವ ಮಹಿಳೆಯರ ಸಂಘಟನೆ ಸಂಚಾಲಕಿ ಶ್ರೀಮತಿ ಹರಿಣಿ ಕಕ್ಕೇರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ|ಎಸ್.ಆರ್.ಆರಾಧ್ಯ ಅಧ್ಯಕ್ಷತೆ ವಹಿಸಿದ್ದರು. ಭಾರತದ ವಿದ್ಯಾರ್ಥಿಚಳುವಳಿ, ಶಿಕ್ಷಣ ರಂಗದಲ್ಲಿ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಸಮಸ್ಯೆ, ಸಂಘಟಿತ ಹೋರಾಟದ ಅಗತ್ಯದ ಕುರಿತು ಸಮ್ಮೇಳನದಲ್ಲಿ ಮಾತನಾಡಿದ ಎಲ್ಲಾ ಭಾಷಣಕಾರರು ವಿವರಿಸಿದರು. ಪ್ರಾಧ್ಯಾಪಕ ಶಿವಪ್ಪ ಎತ್ನಟ್ಟಿಯವರು ಶುಭ ಕೋರಿದರು. 7ಜನ ಪದಾಧಿಕಾರಿಗಳನ್ನು 30ಜನರ ಕಾರ್ಯಕಾರಿ ಸಮಿತಿಯನ್ನು ಸಮ್ಮೇಳನ ಆಯ್ಕೆಮಾಡಿತು.

ವಿದ್ಯಾರ್ಥಿ ಯುವಜನರ ದೆಹಲಿಚಲೋ

ಸೆಪ್ಟೆಂಬರ್ 23 ರಂದು ನವ ದೆಹಲಿಯ ಸಂಸತ್ ಭವನದ ಮುಂದೆ ಜರುಗಲಿರುವ ಬೃಹತ್ ರ್‍ಯಾಲಿಯಲ್ಲಿ ದೇಶದ ಎಲ್ಲ ಭಾಗಗಳಿಂದ ಸುಮಾರು ಒಂದು ಲಕ್ಷ ವಿದ್ಯಾರ್ಥಿ ಯುವಜನರು ಭಾಗವಹಿಸುವ ನಿರೀಕ್ಷೆಯಿದೆ.

1981ರಿಂದ ಪ್ರಾರಂಭಿಸಲಾಗಿರುವ ಈ "ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ"ದ ಚಳುವಳಿಯ ಅಂಗವಾಗಿ ಸೆಪ್ಟೆಂಬರ್ 15 ರಂದು ರಾಜ್ಯಾದ್ಯಂತ ವಿಚಾರ ಗೋಷ್ಠಿಗಳು, ಸರ್ಕಾರಿ ಕಛೇರಿಗಳ ಮುಂದೆ ಮತಪ್ರದರ್ಶನಗಳನ್ನು ನಡೆಸಲು ಎಸ್.ಎಫ್.ಐ.ರಾಜ್ಯ ಸಮಿತಿ ಕರೆ ನೀಡಿದೆ.

ಬರಗಾಲದ ಉರಿಯೊಳಗೆ ಉದಯಪುರ

[5ನೇ ಪುಟದಿಂದ]

ಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಕಿಸಾನ್ ಸಭಾದ ನಿಯೋಗವು ಜುಲೈ 28ರಂದು ಡೆಪ್ಯುಟಿ ಕಮಿಷನರ್ ಅನ್ನು ಭೇಟಿಯಾಗಿ ದೊಡ್ಡ ಪ್ರಮಾಣದ ಪರಿಹಾರಕಾರ್ಯ ಪ್ರಾರಂಭಿಸಬೇಕು, ಅರ್ಧಕ್ಕೆ ನಿಂತಿರುವ ಯೋಜನೆಗಳನ್ನು ಪೂರ್ಣಗೊಳಿಸಬೇಕು. ಕಾರ್ಮಿಕರಿಗೆ ಕೊಡ ಬೇಕಾಗಿರುವ ಬಾಕಿ ಹಣವನ್ನು ಕೂಡಲೇ ಕೊಡಬೇಕು, ಭ್ರಷ್ಟಾಚಾರದ ವಿಚಾರಣೆಯಾಗಬೇಕು. ಕನಿಷ್ಟ ಕೂಲಿ ಕಾಯಿದೆಯನ್ನು ಜಾರಿಗೊಳಿಸಬೇಕು. ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟಿತು. ಆದರೆ ಡೆಪ್ಯುಟಿ ಕಮಿಷನರ್ ಯಾವುದೇ ಭರವಸೆ ನೀಡಲು ವಿಫಲರಾದರು. ಇದು ರಾಜಸ್ತಾನ ರಾಜ್ಯ ಸರ್ಕಾರದ ಆಡಳಿತದ ಒಂದು ಮಾದರಿ.

ಕಿಸಾನ್ ಸಭಾ ಮೇಲ್ಕಂಡ ಬೇಡಿಕೆಗಳಿಗಾಗಿ ಸತತವಾಗಿ ಹೋರಾಟವನ್ನಾರಂಭಿಸಿದೆ. ಹಲವಾರು ಗ್ರಾಮಗಳಲ್ಲಿ ಸಭೆಗಳನ್ನು ನಡೆಸಿ ಜನರನ್ನು ಸಂಘಟಿಸಲಾಗುತ್ತಿದೆ. ಕ್ಷಾಮದ ಎದುರಾಗಿ ಒಂದು ದೊಡ್ಡ ಚಳುವಳಿಯನ್ನು ರೂಪಿಸಲು ಕಿಸಾನ್ ಸಭಾ ದೃಢ ಪ್ರತಿಜ್ಞೆ ಕೈಗೊಂಡಿದೆ.

○

ಭೀಕರ ಬರಗಾಲ ಸರಕಾರದ ವೈಫಲ್ಯ

(4ನೇ ಪುಟದಿಂದ)

ಲಾಭಕೋರತನ, ಭ್ರಷ್ಟಾಚಾರ ; ಬೆಲೆ ಏರಿಕೆ, ಹಣದುಬ್ಬರ; ಭಾರೀ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಜನರ ವಲಸೆ ! ಧನಕರುಗಳು ಕಟುಕರ ಮನೆಗೆ ;ಹೆಣ್ಣು ಮಕ್ಕಳನ್ನು ಸೂಳೆಗೇರಿಗೆ ಮಾರುವುದು; ಮಕ್ಕಳನ್ನು, ಯುವಕರನ್ನು ಜೀತದಾಳುಗಳನ್ನಾಗಿಸಿ ತುತಿಗಾಗಿ ಸಾಲ ಎತ್ತುವುದು; ಅಸಂಖ್ಯಾತ ಜನರಿಗೆ ರೋಗ ರುಜಿನಗಳು, ಕಷ್ಟಕಾರ್ಪಣ್ಯಗಳು, ಸಾವು ನೋವುಗಳು....ಇಂತಹ ಬಹುಮುಖ ಸಮಸ್ಯೆಗಳಿಗೆ ಸರ್ಕಾರದ ಒಂದೆರಡು ತುರ್ತಿನ ಪರಿಹಾರ ಕಾರ್ಯಗಳು ಎಷ್ಟರ ಮಟ್ಟಿಗೆ ಪ್ರಯೋಜನವಾಗುವುವು ?

ನಾಗರೀಕ ಪೂರೈಕೆಯ ಕೇಂದ್ರ ಮಂತ್ರಿ ಹೆಚ್.ಕೆ. ಎಲ್. ಭಗತ್ ಹೇಳುತ್ತಾರೆ, ಸರ್ಕಾರದ ಗೋದಾಮುಗಳಲ್ಲಿ 23.5 ಮಿ.ಟನ್. ಆಹಾರ ಧಾನ್ಯಗಳ ಸಂಗ್ರಹ ಇದೆ. ಅದನ್ನು ಬರಗಾಲ ಪೀಡಿತ ಪ್ರದೇಶಗಳಿಗೆ ಬಿಡುಗಡೆ ಮಾಡಲಾಗುವುದು. ಎಂದು ಸಂತೋಷ ಆದರೆ, ಗೋದಾಮುಗಳಲ್ಲಿರುವುದು ಗೋದಿ; ಈ ವರ್ಷದ ಬರಗಾಲದಿಂದಾಗಿ ಶೇ. 30 ರಷ್ಟು ಅಕ್ಕಿ ಬೆಳೆ, ಶೇ. 50 ರಷ್ಟು ಬಾಜ್ರಾ ಬೆಳೆ ಮತ್ತು ಶೇ 65ರಷ್ಟು ನೆಲಗಡಲೆ ಬೆಳೆ ಇಳಿಮುಖವಾಗಲಿದೆ. ಅಕ್ಕಿ, ಬಾಜ್ರಾ, ಎಣ್ಣೆ ಬೀಜಗಳ ತೀವ್ರ ಅಭಾವವಿರುವುದರಿಂದ ಕೇಂದ್ರ ಸರ್ಕಾರ ಇವುಗಳನ್ನು ತುರ್ತಾಗಿ ಸಾಕಷ್ಟು ಆಮದು ಮಾಡಿಕೊಳ್ಳಬೇಕು. ಆಮೇಲೆ ವಿತರಣೆ. ಭೋಗ ವಸ್ತುಗಳ, ಅನವಶ್ಯಕ ಸಾಮಗ್ರಿಗಳ ಆಮದು ನಿಲ್ಲಿಸಿ, ಬರಗಾಲ ಪೀಡಿತ ಜನರಿಗೆ ಅತ್ಯಗತ್ಯದ ವಸ್ತುಗಳನ್ನು ಆಮದು ಮಾಡಬೇಕು.

ಗೋದಾಮುಗಳಲ್ಲಿರುವ, ಆಮದು ಮಾಡಲಿರುವ ಆಹಾರ ಧಾನ್ಯಗಳನ್ನೂ, ಜೀವನಾವಶ್ಯಕ ವಸ್ತುಗಳನ್ನು ಸರ್ಕಾರ ಬರ ಪೀಡಿತ ಜನರಿಗೆ ಹೇಗೆ ವಿತರಣೆ ಮಾಡುವುದು ? ಕಳೆದ 40 ವರ್ಷಗಳಲ್ಲಿ ದೇಶದ ಎಲ್ಲಾ ಜನರಿಗೆ ಇನ್ನೂ ಪಡಿತರ ಪದ್ಧತಿಯ, ನ್ಯಾಯ ಬೆಲೆಯ, ಸಾರ್ವಜನಿಕ ವಿತರಣಾ ವ್ಯವಸ್ಥೆಯಿಲ್ಲ. ಅವುಗಳು ಹೆಚ್ಚಾಗಿ ನಗರ ಪ್ರದೇಶಗಳಿಗೆ ಸೀಮಿತವಾಗಿವೆ. ಕಾರಣ, ಖಾಸಗೀ ವ್ಯಾಪಾರಿಗಳ ಮೂಲಕವೇ ಹೆಚ್ಚಾಗಿ ಇವುಗಳನ್ನು ಬರಗಾಲ ಪ್ರದೇಶಗಳಿಗೆ ಮುಟ್ಟಿಸಬೇಕು. ಈ ವ್ಯವಹಾರದಲ್ಲಿ ವ್ಯಾಪಾರಿಗಳು, ದಳ್ಳಾಳಿಗಳು ಲಾಭ ಗಿಟ್ಟಿಸಬೇಕು. ಅಧಿಕಾರಿಗಳು ಲಂಚ ಎತ್ತಬೇಕು ಅಳಿದುಳಿದುದು ಬರಪೀಡಿತ ಜನರಿಗೆ ತಲುಪಬೇಕು.

ಗ್ರಾಮೀಣ ಉದ್ಯೋಗ

ಪಡಿತರ ಅಂಗಡಿಗಳಲ್ಲಿ, ಖಾಸಗಿ, ಮಾರುಕಟ್ಟೆಗಳಲ್ಲಿ ಆಹಾರ ಧಾನ್ಯಗಳ ಸರಬರಾಜು ಆದರೂ, ಬರ ಪೀಡಿತ ಗ್ರಾಮೀಣ ಬಡ ಜನರಿಗೆ ಇವುಗಳು ಪುಕ್ಕಟೆ ಸಿಗುತ್ತವೆಯೇ ?ಅಲ್ಲ. ಅವರು ಬೆಲೆಕೊಟ್ಟು ಕೊಂಡುಕೊಳ್ಳಬೇಕು. ಅಂದರೆ, ಬರಪೀಡಿತ ಜನರಿಗೆ ಆಹಾರ ಸಾಮಾಗ್ರಿಗಳನ್ನು ಕೊಂಡುಕೊಳ್ಳಲು ಗ್ರಾಹಕ ಶಕ್ತಿ, ಆದಾಯ ಬೇಕು. ಉದ್ಯೋಗ ಇದ್ದರೆ ಮಾತ್ರ ಆದಾಯ ಬರುವುದು. ಬರಗಾಲದಿಂದ ಕೃಷಿ, ಕಾರ್ಮಿಕರಿಗೆ, ಬಡ ರೈತರಿಗೆ ಬಿತ್ತುವ ಉಳುವ, ನೆಡುವ, ಕೊಯ್ಯುವ, ಹಸನು ಮಾಡುವ, ಹತ್ತಾರು, ಉದ್ಯೋಗಗಳು ಇಲ್ಲದಾಗಿ ಲಕ್ಷಗಟ್ಟಲೆ ನಿರುದ್ಯೋಗಿಗಳಾಗುವರು. 1960 ರಲ್ಲಿ ಬರಗಾಲ ಪೀಡಿತ ಜನರ ಸಂಖ್ಯೆ 1.8 ಕೋಟಿ, 1970ರಲ್ಲಿ 2.4ಕೋಟಿ 1986ರಲ್ಲಿ 19.2ಕೋಟಿ, ಅಂದರೆ, ಈ ವರ್ಷ ದೇಶದ ಸುಮಾರು20ಕೋಟಿ ಗ್ರಾಮೀಣ ಜನರಿಗೆ ವರ್ಷವಿಡೀ ಉದ್ಯೋಗ ಕೊಡುವ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು. ಅವರು ಈಗಾಗಲೇ ಬಾರೀ ಸಂಖ್ಯೆಯಲ್ಲಿ ಪಟ್ಟಣಗಳಿಗೆ ಉದ್ಯೋಗ ಹುಡುಕುತ್ತಾ ವಲಸೆ ಹೋಗುತ್ತಿದ್ದಾರೆ.

ಕೆಲಸಕ್ಕೆ ಕಾಳು

ಸರ್ಕಾರ ಆಹಾರ ಧಾನ್ಯಗಳ ಸರಬರಾಜಿಗೇ ಗಮನಕೊಡುತ್ತಿದೆ. ಅವುಗಳನ್ನು ಖರೀದಿಸಲು ಜನರಲ್ಲಿ ಗ್ರಾಹಕ ಶಕ್ತಿ ನೀಡಲು ವ್ಯಾಪಕ ಉದ್ಯೋಗಾವಕಾಶಗಳನ್ನು ಒದಗಿಸಲು ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಅಳಿದುಳಿದ ವ್ಯವಸಾಯ ಕೆಲಸ,ಬಾವಿ,ಕೆರೆ, ಕಾಲುವೆ ತೋಡುವುದು. ರಸ್ತೆ, ಶಾಲೆ,ಆಸ್ಪತ್ರೆ ಕಟ್ಟುವುದು-ಇತ್ಯಾದಿ ಲೋಕೋಪಯೋಗಿ ಕೆಲಸಗಳಲ್ಲಿ ಹಾಗೂ ಗ್ರಾಮೀಣ ಕೈಕಸುಬುಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ನಿರ್ಮಿಸಬೇಕು ಆಹಾರ ಧಾನ್ಯಗಳನ್ನು ಅಂಶಿಕವಾಗಿ ಕೂಲಿದರದಲ್ಲಿ ಕೊಡುವ, ಕೆಲಸಕ್ಕೆ-ಕಾಳು ಯೋಜನೆಯನ್ನು' ಪುನಃ ಪ್ರಾರಂಭಿಸ ಬೇಕು.

ರಾಜ್ಯಗಳಿಗೆ ಕೇಂದ್ರದ ನೆರವು

ಆದರೆ, ಪ್ರಸಕ್ತ ಪ್ರಮಾಣದಲ್ಲಿ ಬರಗಾಲ ಪೀಡಿತ ಜನರಿಗೆ ಪರಿಹಾರ ಕಾರ್ಯ ಕೈಗೊಳ್ಳಲು ರೂ 12,000 ಕೋಟಿ ಸಂಪನ್ಮೂಲ ಬೇಕೆಂದು ಅಂದಾಜು ಮಾಡಲಾಗಿದೆ. (ಭಾರತದ ಸಂಖ್ಯಾ ಸಂಸ್ಥೆ ದೆಹಲಿ: ಇಂಡಿಯನ್ ಎಕ್ಸ್‌ಪ್ರೆಸ್: 27.8.87) ಅದರಲ್ಲಿ ಅರ್ಧಾಂಶದಷ್ಟು ಆಹಾರ ಧಾನ್ಯಗಳ ಮೂಲಕ ಕೂಲಿಪಾವತಿ ಮಾಡಿದರು. ಇನ್ನೂ ರೂ 6000 ಕೋಟಿಯಷ್ಟು ಸಂಪನ್ಮೂಲ ಒದಗಿಸಬೇಕು. ಕೇಂದ್ರ ಸರಕಾರ ಸದ್ಯ ರೂ. 1000 ಕೋಟಿಯಷ್ಟೇ ಪರಿಹಾರ ಕಾರ್ಯಗಳಿಗೆ ಹಣ ನೀಡುವುದಾಗಿ ತಿಳಿಸಿದೆ. ಅಂದರೆ, ಉಳಿದ ಭಾರ ರಾಜ್ಯ ಸರಕಾರಗಳ ಮೇಲೆಯೇ ಬೀಳುವುದು.

ರಾಜ್ಯ ಸರಕಾರಗಳ ಅರ್ಥಿಕ ಅಭಿವೃದ್ಧಿ ವೆಚ್ಚಕ್ಕಿಂತಲೂ ಬರಗಾಲ ಪರಿಹಾರ ವೆಚ್ಚ ಹೆಚ್ಚುತ್ತಿದೆ ! ಕಳೆದ ವರ್ಷ ರಾಜ್ಯ ಸರ್ಕಾರಗಳು ರೂ. 4650 ಕೋಟಿ ಈ ವಿಷಯಕ್ಕೆ ಖರ್ಚು ಮಾಡಿದರೆ, ಕೇಂದ್ರ ಸಕಾರ ಕೇವಲ ರೂ 609 ಕೋಟಿ ಸಹಾಯ ಧನ ನೀಡಿತ್ತು. ಈಗಿನ ಪದ್ಧತಿಯಂತೆ, ಬರಗಾಲ ಪೀಡಿತ ರಾಜ್ಯಗಳಿಗೆ ಕೇಂದ್ರ ನೆರವು ನೀಡುವುದು ಸಾಲ ರೂಪದಲ್ಲಿ ಅಥವಾ ಅಭಿವೃದ್ಧಿ ವೆಚ್ಚದ ಮುಂಗಡ ಪಾವತಿ ರೂಪದಲ್ಲಿ ಪರಿಣಾಮವಾಗಿ ಅನೇಕ ರಾಜ್ಯಗಳಲ್ಲಿ ಅಭಿವೃದ್ಧಿ ಯೋಜನಾ ಕಾರ್ಯಗಳು ಸಂಪೂರ್ಣ ಸ್ಥಗಿತವಾಗಿದೆ. ಸಂಪನ್ಮೂಲಗಳ ಸಿಂಹಪಾಲು ಬರಗಾಲ ಪರಿಹಾರಕೇ ಮೀಸಲಾಗಿವೆ. ಆದುದರಿಂದ ಮುಂದೆ ಯಾದರೂ ಕೇಂದ್ರ ಸರ್ಕಾರ ರಾಜ್ಯಗಳಿಗೆ ಬರಗಾಲ ಪರಿಹಾರವನ್ನು ನೇರ ಸಹಾಯ (out raight grant) ರೂಪದಲ್ಲಿ ನೀಡಬೇಕು.

○

ರಾಜೀವ್ ಸರಕಾರ ತಪ್ಪಿತಸ್ಥರ ಕಟಕಟೆಯಲ್ಲಿ

[7ನೇ ಪುಟದಿಂದ]

ಸದಸ್ಯರಿಗೆ ಫರ್ಮಾನು ಹೊರಡಿಸುವ ಅಗತ್ಯಬಿತ್ತು ಎಂಬುದು ಗಮನಾರ್ಹ. ಆದರೂ ವಿರೋಧ ಪಕ್ಷಗಳ ಸದಸ್ಯರ ಹೋರಾಟ, ಪ್ರಚಾರದಿಂದ ಈ ಜಂಟಿ ಸಮಿತಿಗೆ ಯಾವುದೇ ಕಿಮ್ಮತ್ತು ಜನ ನೀಡುತ್ತಿಲ್ಲ. ಸರ್ಕಾರದ ಉದ್ದೇಶ ಫಲಿಸಿಲ್ಲ.

ಬರ ಇತ್ಯಾದಿ

ಈ ಅಧಿವೇಶನದಲ್ಲಿ ಚರ್ಚೆಗೊಳಗಾದ ಇನ್ನೊಂದು ಮುಖ್ಯ ವಿಚಾರವೆಂದರೆ ದೇಶದೆಲ್ಲೆಡೆ ತಾಂಡವವಾಡುತ್ತಿರುವ ಬರ. ಬರವನ್ನು ಎದುರಿಸುವ ಸರ್ಕಾರದ ಕಾರ್ಯಯೋಜನೆ, ತಂತ್ರವನ್ನು ಕಟುವಾಗಿ ಟೀಕಿಸಿದ ಸಿ.ಪಿ.ಐ.(ಎಂ) ಸದಸ್ಯರು 'ಕೂಲಿಗಾಗಿ ಕಾಳು' ಯೋಜನೆಯನ್ನು ಪುನ: ಜಾರಿಗೆ ತರಬೇಕೆಂದು ಒಕ್ಕೊರಲಿನಿಂದ ಒತ್ತಾಯಿಸಿದರು.

ಈ ಅಧಿವೇಶನದಲ್ಲಿ ರಾಷ್ಟ್ರೀಯ ಭದ್ರತಾ (ತಿದ್ದುಪಡಿ) ಸುಗ್ರೀವಾಜ್ಞೆಯನ್ನು ಮಂಡಿಸಲಾಗಿದ್ದು ಇದರ ವಿರುದ್ಧ ಪಕ್ಷದ ಸದಸ್ಯರು ತಮ್ಮ ದನಿ ಎತ್ತಿದರು. ತಾನೇ ಹುಟ್ಟುಹಾಕಿರುವ ಭಯೋತ್ಪಾದಕತೆಯನ್ನು ಎದುರಿಸುವ ಹೆಸರಲ್ಲಿ, ಜನ-ವಿರೋಧಿ ಅಧಿಕಾರಿಶಾಹಿಯನ್ನು ಗಟ್ಟಿಗೊಳಿಸುವ ಪ್ರಜಾಪ್ರಭುತ್ವ ವಿರೋಧಿ ಅಧಿಕಾರಗಳನ್ನು ಸರ್ಕಾರಕ್ಕೆ ಪೋಲೀಸರಿಗೆ ನೀಡುವ ಈ ಸುಗ್ರೀವಾಜ್ಞೆಯನ್ನು ಖಂಡಿಸಿದರು.

ಶ್ರೀಲಂಕಾ ಒಪ್ಪಂದವನ್ನು ಸ್ವಾಗತಿಸುತ್ತಾ, ಇದನ್ನು ಜಾರಿಗೊಳಿಸುವಲ್ಲಿರುವ ಆತಂಕಗಳನ್ನು ನಿವಾರಿಸಿ ಸಾಮ್ರಾಜ್ಯಶಾಹಿ ಪಿತೂರಿಯನ್ನು ವಿಫಲಗೊಳಿಸಲು ಸಿ.ಪಿ.ಐ (ಎಂ) ಸದಸ್ಯರುಒತ್ತಾಯಿಸಿದರು. ಟ್ರಿಂಕೊಮಲೈಯನ್ನು ಯಾವುದೇ ದೇಶಕ್ಕೆ ಸೇನಾನೆಲೆಗೆ ಕೊಡುವುದಿಲ್ಲ ಎಂಬಒಪ್ಪಂದದ ಕಲಮಿನ ಮಹತ್ವವನ್ನು ಸದಸ್ಯರು ಎತ್ತಿ ಹೇಳಿದರು. ಅಧಿವೇಶನದ ಸಮಯದಲ್ಲಿ ನಡೆಯುತ್ತಿದ್ದ ವಿಶ್ವವಿದ್ಯಾನಿಲಯ ಶಿಕ್ಷಕರ ಮುಷ್ಕರ ಬಗ್ಗೆ ಬಾರಿ ಬಾರಿಗೆ ಸರ್ಕಾರದ, ಸದನದ ಗಮನ ಸೆಳೆದು, ಅವರ ನ್ಯಾಯಯುತ ಬೇಡಿಕೆಗಳನ್ನು ಬಲವಾಗಿ ಸಮರ್ಥಿಸಿದರು.

ಸೆಣಬು ಉದ್ಯಮದ ಬಗ್ಗೆ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಬಯಲಿಗೆಳೆದು, ಬಿಕ್ಕಟ್ಟಿಗೆಕಾರಣವಾದ ಕೃತಕ ನೂಲಿನಚೀಲಗಳನ್ನು ಪ್ರೋತ್ಸಾಹಿಸುವ ಸರ್ಕಾರದ ನೀತಿಯನ್ನು ಖಂಡಿಸಲಾಯಿತು. ಬಿಕ್ಕಟ್ಟು ಪರಿಹಾರಕ್ಕೆ ಸರ್ಕಾರದ ಕ್ರಮಗಳು, ಸೆಣಬಿನ 'ದೊರೆ'ಗಳ ಬೊಜ್ಜು ಇನ್ನಷ್ಟು ಹೆಚ್ಚಿಸುವ ಬಗ್ಗೆ ಉಚ್ಚರಿಸಲಾಯಿತು.

ಬಾಲ ಕಾರ್ಮಿಕರ ಬಗ್ಗೆ ರಾಷ್ಟ್ರೀಯನೀತಿ,ಗ್ರಾಮೀಣ ಕಾರ್ಮಿಕರ ಬಗ್ಗೆ ರಾಷ್ಟ್ರೀಯ ಕಮಿಶನ್ ಮತ್ತು ಗ್ರಾಚ್ಯುಯಿಟಿ ಮಸೂದೆ (ತಿದ್ದುಪಡಿ) ಬಗ್ಗೆ ಕಾರ್ಮಿಕರ ಹಿತಾಸಕ್ತಿ ಎತ್ತಿಹಿಡಿಯುವ ಕಾರ್ಯವನ್ನು ಸದಸ್ಯರು ಸಮರ್ಥವಾಗಿ ನಿರ್ವಹಿಸಿದರು.

○

ರೈತರಿಗೆ ಪರಿಹಾರಕ್ಕಾಗಿ ಕಾ|| ಮಾನ್ಪಡೆ ಒತ್ತಾಯ

ಗುಲ್ಬರ್ಗಾ ಜಿಲ್ಲಾ ಪರಿಷತ್ ಸಭೆ 29.8.87ಕ್ಕೆ ಕರೆಯಲಾಗಿತ್ತು ಈ ಸಭೆಯಲ್ಲಿ ರೇಷ್ಮೆ ಬೆಳೆ ಯೋಜನೆ, ಮಾರುಕಟ್ಟೆ, ಸ್ಥಾಯಿ ಸಮಿತಿ ರಚನೆ ಮತ್ತು ಕುಟುಂಬ ಕಲ್ಯಾಣ ಗುರಿ ಸಾಧಿಸುವ ಕುರಿತು ಚರ್ಚಿಸಲಾಯಿತು.

ಕಾ||ಮಾರುತಿ ಮಾನ್ಪಡೆಯವರು ಆಳಂದ ತಾಲ್ಲೂಕಿನಲ್ಲಿ ಪ್ರವಾಹದಿಂದ ನಾಲ್ಕು ಕೆರೆಗಳು ಹೊಡೆದು ಹೋಗಿ ನಷ್ಟ ಅನುಭವಿಸಿದ ರೈತರಿಗೆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಅರ್ಪಿಸ ಬೇಕೆಂದು ಒತ್ತಾಯಿಸಿದರು.

ರೇಷ್ಮೆ ವ್ಯವಸಾಯಕ್ಕೆ ಸರಿಯಾದ ಮಾರುಕಟ್ಟೆ, ಲಾಭದಾಯಕ ಬೆಲೆ ಇಲ್ಲದ್ದರಿಂದ ಬೆಳೆ ಕಡಿಮೆಯಾಗಿದೆ ಎಂದು ಮಾನ್ಪಡೆ ಸಭೆಯ ಗಮನಸೆಳೆದರು. ಚರಕಾಕೇಂದ್ರ ತೆರೆಯಲು, ಕೃಷಿಗೆ ವಿದ್ಯುತ್ ಪೂರೈಕೆ ವಿಳಂಬ ತಪ್ಪಿಸಬೇಕೆಂದು, ಜಿಲ್ಲಾ ಪರಿಷತ್ ಸ್ಥಾಯಿ ಸಮಿತಿಗಳಿಗೆ ಅವಿರೋಧವಾಗಿ ಸದಸ್ಯರನ್ನು ಆರಿಸಬೇಕೆಂದು ತೀರ್ಮಾನಿಸಲಾಯಿತು.

○

ಪರಮಾಣು ಪರೀಕ್ಷೆ ನಿಷೇಧ ಕಾರ್ಯಸಾಧ್ಯ

ಸೋವಿಯೆತ್ ಒಕ್ಕೂಟ ಪರಮಾಣು ಯಂತ್ರದ ಪರೀಕ್ಷಣಾ ಸ್ಫೋಟಗಳನ್ನು ಏಕ ಪಕ್ಷೀಯವಾಗಿ ಒಂದು ವರ್ಷಕಾಲ ನಿಲ್ಲಿಸಿ, ಮತ್ತೆ ಎರಡು ಬಾರಿ ವಿಸ್ತರಿಸಿ, ಕೊನೆಗೂ ಅಮೇರಿಕಾ ಇದಕ್ಕೆ ತಕ್ಕ ಪ್ರತಿಕ್ರಿಯೆ ತೋರದ್ದರಿಂದ ಪರೀಕ್ಷಣೆಗಳನ್ನು ಮತ್ತೆ ಆರಂಭಿಸಿರುವುದು ಎಲ್ಲರಿಗೂ ತಿಳಿದ ವಿಷಯ. ಪರಮಾಣು ಪರೀಕ್ಷಾ ನಿಷೇಧ ಒಪ್ಪಂದವೊಂದು ನಡೆದರೆ ಅದರ ಉಲ್ಲಂಘನೆಯನ್ನು ಪರೀಕ್ಷಿಸಲು ಸಾಧ್ಯವಿಲ್ಲ ಎನ್ನುವುದು ಅಮೇರಿಕನ್ ಸರ್ಕಾರವುಂದೊಡುತ್ತಾ ಬಂದ ನೆವ. ಈಗ ಅದಕ್ಕೂ ಆಧಾರವುಳಿದಿಲ್ಲ.

ಸೆಪ್ಟೆಂಬರ್ 2ರಂದು ಅಮೇರಿಕನ್ ಮತ್ತು ಸೋವಿಯೆತ್ ವಿಜ್ಞಾನಿಗಳು ಮಧ್ಯ ಏಶಿಯಾದ ತಪ್ಪಲಿನ ಒಂದು ಸೋವಿಯೆತ್ ಪ್ರದೇಶದಲ್ಲಿ ಅತ್ಯಂತ ಕಡಿಮೆ ಶಕ್ತಿಯ ಅಂದರೆ ಕೇವಲ 10 ಟನ್ ಶಕ್ತಿಯ ಟಿ.ಎನ್.ಟಿ. ಯನ್ನು 20 ಮೀಟರ್ ಆಳದ ತೂತಿನೊಳಗೆ ಆಸ್ಫೋಟಿಸಿದರು. ಇದು 640 ಕಿ.ಮಿ. ದೂರದಲ್ಲಿದ್ದ ಮೂರು ಸಂಶೋಧನಾ ಕೇಂದ್ರಗಳಲ್ಲಿ ಸ್ಪಷ್ಟವಾಗಿ ದಾಖಲಾಯಿತು. ಅಂದರೆ ಇದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಶಕ್ತಿಶಾಲಿಯಾದ ಪರಮಾಣು ಸ್ಫೋಟವನ್ನು ಕಂಡು ಹಿಡಿಯುವುದು ಏನೇನೂ ಕಷ್ಟದ ಕೆಲಸವಲ್ಲ ಎಂಬುದನ್ನು ಈ ಪರೀಕ್ಷೆಯನ್ನು ಸ್ವತಃ ವೀಕ್ಷಿಸಿದ ಅಮೇರಿಕನ್ ಸಂಸತ್ತಿನ ಮೂವರು ಸದಸ್ಯರು ಹಾಗೂ ಕೆಲವು ಪಾಶ್ಚಿಮಾತ್ಯ ಪತ್ರಿಕಾಕರ್ತರಿಗೆ ಸೋವಿಯೆತ್ ವಿಜ್ಞಾನಿಗಳು ಮನವರಿಕೆ ಮಾಡಿ ಕೊಟ್ಟಿದ್ದಾರೆ.

ಇದರ ಜತೆಗೆ ಅಮೇರಿಕಾ ತನ್ನ ಪರಮಾಣು ಸ್ಫೋಟವೊಂದನ್ನು ಸೋವಿಯೆತ್ ಒಕ್ಕೂಟದಲ್ಲಿ ನಡೆಸಿ ಅದರ ದಾಖಲೆಯನ್ನು ತನ್ನ ದೇಶದಲ್ಲಿರುವ ಪರೀಕ್ಷಣಾ ಕೇಂದ್ರಗಳಲ್ಲಿ ಕರಾರುವಕ್ಕಾಗಿ ಪಡೆಯಲು ಅವಕಾಶ ಕೊಡಲು ಸೋವಿಯೆತ್ ಒಕ್ಕೂಟ ಸಿದ್ಧವಿರುವುದಾಗಿ ರಕ್ಷಣಾ ಇಲಾಖೆಯ ವಕ್ತಾರರೊಬ್ಬರ ಹೇಳಿಕೆ ಅಮೇರಿಕನ್ ಆಳುವ ವಲಯಗಳಲ್ಲಿ ಭಯವುಂಟು ಮಾಡಿದಂತೆ ಕಾಣುತ್ತಿದೆ. ಇದಕ್ಕೆ ಒಪ್ಪಿದರೆ ಸೋವಿಯೆತ್ ಒಕ್ಕೂಟ ನಡೆಸ ಬಹುದಾದ ಯಾವುದೇ ಪರಮಾಣು ಸ್ಫೋಟವನ್ನು ಕರಾರುವಾಕ್ಕಾಗಿ ಪತ್ತೆ ಹಚ್ಚುವುದು ಅಮೇರಿಕಾಕ್ಕೆ ಸಾಧ್ಯವಾಗುವುದು. ಆದರೆ ಇದಕ್ಕೆ ಪ್ರತಿಯಾಗಿ ಅಮೇರಿಕಾ ಕೂಡಾ ತನ್ನ ಪ್ರದೇಶದಲ್ಲಿ ಸೋವಿಯೆತ್ ಒಕ್ಕೂಟಕ್ಕೆ ಇದೇ ರೀತಿ ಅವಕಾಶ ನೀಡ ಬೇಕಾಗುತ್ತದೆ. ಅದ್ದರಿಂದಲೇ ಏನೋ, ಅಮೇರಿಕಾದಿಂದ ಈ ಸಲಹೆಗೆ ಇನ್ನೂ ಪ್ರತಿಕ್ರಿಯೆ ಬಂದಿಲ್ಲ.

ಜಾಗತಿಕ ಶಾಂತಿ ನಿಜವಾಗಿ ಯಾರಿಗೆ ಬೇಕು ? ಉತ್ತರ ಮತ್ತೊಮ್ಮೆ ಸ್ಪಷ್ಟ. ●

"ಅಮೇರಿಕನ್ ಹಿತಾಸಕ್ತಿ"ಗಳ ರಕ್ಷಣೆಗಾಗಿ !

ಫಿಲಿಪ್ಪೈನ್ಸ್‌ನಲ್ಲಿ ಕಳೆದ ವಾರ ಅಕ್ವಿನೋ ವಿರುದ್ಧ ಇನ್ನೊಂದು ಪ್ರಯತ್ನ ವಿಫಲಗೊಂಡಿದೆ. ಇದಕ್ಕೆ ಒಂದು ತಿಂಗಳ ಮೊದಲು ರಾಜಧಾನಿ ಮನಿಲಾದಲ್ಲಿ ಒಂದಾದ ಮೇಲೊಂದರಂತೆ ಬಾಂಬು ದಾಳಿಗಳು ನಡೆದಿದ್ದವು. ಇಲ್ಲಿನ ಪತ್ರಿಕೆ "ಫಿಲಿಪ್ಪೈನ್ ಡೈಲಿ ಎನ್ಕ್ವೈಯರರ್" ಪ್ರಕಾರ ಇದನ್ನು ಅಮೇರಿಕಾದ ಗುಪ್ತಚಾರ ಸಂಸ್ಥೆ ಸಿ.ಐ.ಎ. ನಡೆಸಿದೆ. ಬಾಂಬ್ ದಾಳಿಗಳ ಒಂದು ವಾರದ ಮೊದಲು ಸಿ.ಐ.ಎ. ಏಜೆಂಟರು ಮಾರ್ಕೊಸ್ ಬೆಂಬಲಿಗರನ್ನು ಭೇಟಿ ಮಾಡಿ ಸಂಚು ಹೂಡಿದ್ದರು, ಎಂದು ಆ ಪತ್ರಿಕೆ ಆಪಾದಿಸಿದೆ. ಆದರೆ ಸಿ.ಐ.ಎ. ಏಕೆ ಹೀಗೆ ತಲೆಕೆಡಿಸಿ ಕೊಳ್ಳುತ್ತಿದೆ? ಯಾಕೆಂದರೆ "ಅಮೇರಿಕಾದ ಹಿತಾಸಕ್ತಿ" ರಕ್ಷಿಸಲು! ಅದಕ್ಕಾಗಿ ಎರಡು ವರ್ಷಗಳ ಯೋಜನೆಯೊಂದನ್ನು ಈಗ 115 ಏಜೆಂಟರು ಕಾರ್ಯಗತ ಗೊಳಿಸುತ್ತಿದ್ದಾರೆ, ಎಂದು ಸಿ.ಐ.ಎ.ನ ಪ್ರಮುಖ ಚಟುವಟಿಕೆಗಳಲ್ಲಿಸುಮಾರು ಇಪ್ಪತ್ತು ವರ್ಷಗಳ ಕಾಲ ಭಾಗಿಯಾಗಿದ್ದ ರಾಲ್ಫ್ ಮೆಕ್‌ಗೀಹೀ ಹೇಳುತ್ತಾರೆ. ಆ ಅಮೇರಿಕನ್ ಹಿತಾಸಕ್ತಿಯಾದರೂ ಯಾವುದು? ಪ್ರಮುಖವಾಗಿ ಫಿಲಿಪ್ಪೈನ್ಸ್‌ನಲ್ಲಿರುವ ಅದರ ಎರಡುಸೈನಿಕದೊಡ್ಡನೆಲೆಗಳಬಗ್ಗೆ ಒಪ್ಪಂದ 1991ರಲ್ಲಿ ಮುಗಿಯುತ್ತದೆ. ಅದನ್ನು ಮುಂದುವರಿಸಲು ಅಕ್ವಿನೋ ಸರ್ಕಾರದ ಮೇಲೆ ಸತತ ಒತ್ತಡ ಹೇರುವುದೇ! ಸಿ.ಐ.ಎ. ಯೋಜನೆಯಮುಖ್ಯ ಗುರಿ ಎಂದು ಆ ಪತ್ರಿಕೆ ಹೇಳಿದೆ.

ಶ್ರೀಲಂಕಾ–ಭಾರತ ಒಪ್ಪಂದ ಕೂಡಾ "ಅಮೇರಿಕನ್ ಹಿತಾಸಕ್ತಿ"ಗಳಿಗೆ ವಿರುದ್ಧವಾದುದೆಂದು ಹೆರಿಟೇಲ್ ಫೌಂಡೇಶನ್ ಗೋಳಾಡಿರುವ ಸುದ್ದಿಯನ್ನು ಈಗಾಗಲೇ ನೀವು'ಐಕ್ಯರಂಗ'ದಲ್ಲಿ ಓದಿದ್ದೀರಿ. ಟ್ರಿಂಕೋಮಾಲಿ ಸೈನಿಕ ನೆಲೆ ಹಾಗೂ ಬಾನುಲಿ ಅಪಪ್ರಚಾರಕ್ಕೆ ಅಡ್ಡಿ ತಂದುದಕ್ಕೆ ಗೋಳಾಟ ಸ್ವಾಭಾವಿಕವೇ.

ಇದರ ಜೊತೆಗೆ ಈಗ ಇನ್ನೊಂದು ಸುದ್ದಿ ಪಿ ಟಿ. ಐ. ನಿಂದ ಬಂದಿದೆ. ಪಾಕಿಸ್ತಾನದಲ್ಲಿ ಮಿಲಿಟರಿ ಸರ್ವಾಧಿಕಾರಿಗಳ ಪರಂಪರೆ ಆರಂಭಿಸಿದ ಮಾಜಿ ಸೇನಾಧಿಪತಿ ಮತ್ತು ಅಧ್ಯಕ್ಷ ಅಯೂಬ್ ಖಾನರು ಅಧಿಕಾರದ ಗದ್ದುಗೆ ಕಸಿದು ಕೊಳ್ಳುವಲ್ಲಿ ಅಮೆರಿಕಾದ ಕೈವಾಡವಿತ್ತೆಂದುಇತ್ತೀಚೆಗೆ ಪ್ರಕಟವಾದ 30 ವರ್ಷಗಳ ಹಿಂದಿನ ಅಮೆರಿಕನ್ ಸರ್ಕಾರದ ದಸ್ತಾವೇಜುಗಳಿಂದ ಸ್ಪಷ್ಟವಾಗಿದೆಯಂತೆ. ವಾಸ್ತವವಾಗಿ ಅಯೂಬ್ ಖಾನ್ 1958ರಲ್ಲಿ ಅಧಿಕಾರ ಪಡೆದರು. ಆದರೆ ಅದಕ್ಕೂ ಮೂರು ವರ್ಷ ಮೊದಲೇ ಅವರು ಅಧಿಕಾರಕ್ಕೆ ಬರಬೇಕಾಗಿತ್ತೆಂದು ಅಮೆರಿಕನ್ ಮುಖಂಡರ ಹೆಬ್ಬಯಕೆಯಾಗಿತ್ತಂತೆ! ಏಕೆ ಗೊತ್ತೇ? ಮತ್ತೆ ಅದೇ 'ಅಮೆರಿಕನ್ ಹಿತಾಸಕ್ತಿ' ರಕ್ಷಣೆಗೆ ಈತನೇ ಅತಿಯೋಗ್ಯ ವ್ಯಕ್ತಿ ಎಂಬ ಅಮೆರಿಕನ್ ಆಳುವ ವಲಯಗಳ ತೀರ್ಮಾನ!

ಈ "ಅಮೆರಿಕನ್'ಹಿತಾಸಕ್ತಿ"ಗಳಿಗೂ ಅಮೆರಿಕಾದ ಜನತೆಯ ಹಿತಾಸಕ್ತಿಗಳಿಗೂ ಏನೇನೂ ಸಂಬಂಧವಿಲ್ಲ. ವಾಸ್ತವವಾಗಿ'ಅಮೇರಿಕನ್‌ಹಿತಾಸಕ್ತಿ'ಗಳೆಂದರೆ ಜಗತ್ತಿನ ಎಲ್ಲಾ ಸಾಮರಿಕ ಮಹತ್ವದ ಪ್ರದೇಶಗಳಲ್ಲಿ ಸೈನಿಕ ನೆಲೆಗಳನ್ನು ಗಿಟ್ಟಿಸಿಕೊಂಡು ಜಾಗತಿಕ ಗೂಂಡಾಗಿರಿ ನಡೆಸುವ ಸಾಮ್ರಾಜ್ಯಶಾಹೀ ಹಿತಾಸಕ್ತಿಗಳು.

ಸಂಕ್ಷಿಪ್ತದಲ್ಲಿ.......

★ ಜಪಾನಿನ ಕಾರ್ಮಿಕ ಶಾಸನಗಳಿಗೆ ಸೂಚಿಸಲಾಗಿರುವ ತಿದ್ದುಪಡಿಗಳು ಕುಟುಂಬದ ಜವಾಬ್ದಾರಿಯಿರುವ ಮಹಿಳೆಯರು ಕೆಲಸ ಬಿಡುವಂತೆ ಮಾಡಲಿವೆ ಹಾಗೂ ಕಾರ್ಮಿಕರ ಶೋಷಣೆ ಹೆಚ್ಚಿಸಲಿವೆಯಾದ್ದರಿಂದ ಅದನ್ನು ಮಹಿಳಾ ಸಂಘಟನೆಗಳು ಮತ್ತು ಕಾರ್ಮಿಕ ಸಂಘಟನೆಗಳು ತೀವ್ರವಾಗಿ ವಿರೋಧಿಸುತ್ತಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಜಪಾನಿನ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಜಪಾನೀ ಸರ್ಕಾರದ ಪ್ರಕಾರ ಈ ತಿದ್ದುಪಡಿಗಳ ಉದ್ದೇಶ ವಂತೆ !

★ ಕಾಮನ್‌ವೆಲ್ತ್ ತನ್ನ ಹೆಸರಿಗೆ ತಕ್ಕಂತೆ ವರ್ತಿಸಿಲ್ಲ, ಕಾಮನ್‌ವೆಲ್ತ್ ದೇಶಗಳ ನಡುವೆ ಸಮಾನ ಅಂಶಗಳೂ ಇಲ್ಲ, ಪರಸ್ಪರ ತಿಳುವಳಿಕೆಯೂ ಇಲ್ಲ-ಹೀಗೆಂದು ಟೀಕಿಸಿದವರು ಮಲೇಶ್ಯಾದ ಪ್ರಧಾನ ಮಂತ್ರಿ ಡಾ. ಮಹಾತೀರ್ ಮಹಮ್ಮದ್. 33ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನ ಉದ್ಘಾಟಿಸುತ್ತಾ ಅವರು ಈ ರೀತಿ ಉದ್ಗರಿಸಿದರು. ಕಾಮನ್ ವೆಲ್ತ್‌ನಲ್ಲಿನ ಶ್ರೀಮಂತ ದೇಶಗಳು ಬಡದೇಶಗಳ ಸಮಸ್ಯೆಗಳನ್ನು ಅರ್ಥಮಾಡಿ ಕೊಳ್ಳಲು ಈ ಸಮಸ್ಯೆಗಳಿಗೆ ಸ್ವತಃ ಆ ಶ್ರೀಮಂತ ದೇಶಗಳೇ ಕಾರಣವಾಗಿದ್ದಾಗ ಕೂಡಾ ನಿರಾಕರಿಸುತ್ತವೆ ಎಂದೂ ಅವರು ಟೀಕಿಸಿದರು.

★ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಉದ್ದೇಶಿತ ಹೊಸ ವಲಸೆ ಕಾನೂನು ಏಶ್ಯನ್ನರು ತಮ್ಮ ಕುಟುಂಬದ ಸದಸ್ಯರನ್ನು ಜತೆಗೆ ಕರೆ ತರುವುದನ್ನು ಕಷ್ಟ ಸಾಧ್ಯ ಗೋಳಿಸಲಿದೆ, ಇದು ಏಶ್ಯನ್ನರ ವಿರುದ್ಧ ಪಕ್ಷಪಾತ ಭಾವನೆಯಿಂದ ಕೂಡಿದೆ ಎಂದು ಅಲ್ಲಿನ ಏಶ್ಯನ್ ಸಂಘಟನೆಗಳು ದೂಷಿಸಿವೆ.

ಪಾರ್ಲಿಮೆಂಟಿನ ಮಳೆಗಾಲದ ಅಧಿವೇಶನ

ರಾಜೀವ್ ಸರ್ಕಾರ ತಪ್ಪಿತಸ್ಥರ ಕಟಕಟೆಯಲ್ಲಿ

ಈ ಬಾರಿ ಪಾರ್ಲಿಮೆಂಟಿನ ಮಳೆಗಾಲದ ಅಧಿವೇಶನ ನಿರೀಕ್ಷಿಸಿದಂತೆ ಕೋಲಾಹಲಕಾರಿಯಾಗಿತ್ತು. ಎಡಪಕ್ಷಗಳು ಮೊದಲೇ ನಿರ್ಧರಿಸಿದಂತೆ, ಬೋಫೋರ್ಸ್ ನಂತಹ ಹಗರಣಗಳು ಮತ್ತು ಜನರನ್ನು ಕಾಡುವ ಸಮಸ್ಯೆಗಳು ರಾಜೀವ್ ಸರ್ಕಾರದ ಪಾತ್ರವನ್ನು ಬಯಲು ಮಾಡುವ ಪ್ರಯತ್ನದಲ್ಲಿ ಯಶಸ್ವಿಯಾದವು ಎನ್ನಬಹುದು.

ಬೋಫೋರ್ಸ್ 'ಭೂತ'

ಇಡೀ ಅಧಿವೇಶನ ದುದ್ದಕ್ಕೂ ಬೋಫೋರ್ಸ್ ಹಗರಣ 'ಭೂತ' ದಂತೆ ರಾಜೀವ್ ಸರ್ಕಾರವನ್ನು ನಾನಾ ರೂಪದಲ್ಲಿ, ಹಲವು ಹತ್ತು ರೀತಿಯಲ್ಲಿ ಕಾಡಿತು. ಎರಡು ಸದನಗಳಲ್ಲೂ ಮೊದಲಿನ ದಿನದಿಂದ ವಿರೋಧ ಪಕ್ಷಗಳು, ಪಾರ್ಲಿಮೆಂಟರಿ ಜಂಟಿ ಸಮಿತಿಯ ಹೆಸರಿನಲ್ಲಿ ಉಚ್ಚ ವಲಯಗಳಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರ ಬಯಲಿಗೆಳೆಯುವುದನ್ನು ಮುಚ್ಚಿಹಾಕುವ ಸರ್ಕಾರ ಮತ್ತು ಆಳುವ ದ ಪ್ರಯತ್ನದ ವಿರುದ್ಧ ದಿಟ್ಟ ಹೋರಾಟ ನಡೆಸಿದವು. ಇದರಲ್ಲಿ ಸಿ.ಪಿ.ಐ. (ಎಂ) ಪಕ್ಷದ ಸದಸ್ಯರು ನಾಯಕತ್ವ ವಹಿಸಿದರು. ಲೋಕಸಭೆಯಲ್ಲಿ ಸಿ.ಪಿ.ಐ. (ಎಂ) ಸದಸ್ಯರು ಜಂಟಿ ಸಮಿತಿಯ ಬಗ್ಗೆ ವಿರೋಧ ಪಕ್ಷಗಳ ಒಮ್ಮತದ ಅಭಿಪ್ರಾಯವನ್ನು ಮಂಡಿಸುವ ಸೂಚನೆಯನ್ನು ತಿರಸ್ಕರಿಸಿ, ಸರ್ಕಾರಿ ಸೂಚನೆ ಮಂಡಿಸಲು ಸ್ಪೀಕರ್ ಅನುಮತಿ ನೀಡಿದಾಗ ಸಿ.ಪಿ.ಐ. (ಎಂ) ಸದಸ್ಯ ಅಜಯ್ ಬಿಶ್ವಾಸ್ ರೊಚ್ಚಿನ ಭರದಲ್ಲಿ ರಕ್ಷಣಾ ಮಂತ್ರಿಗಳಿಂದ ಕಾಗದ ಪತ್ರ ಕಸಿದರು. ಈ ತಮ್ಮ ವರ್ತನೆಗೆ ಸದಸ್ಯರು ವಿಷಾದ ಸೂಚಿಸಿದರೂ, ಕಾಂಗ್ರೆಸ್ (ಐ) ಸರಕಾರ ಈ ಘಟನೆಯನ್ನು ತನ್ನ ಉದ್ದೇಶಕ್ಕಾಗಿ ಬಳಸುವ ಪ್ರಯತ್ನದಲ್ಲಿ ಆ ಸದಸ್ಯರನ್ನು ಇಡೀಅಧಿವೇಶನಕ್ಕೆ ಸಸ್ಪೆಂಡ್ ಮಾಡುವ ಸೂಚನೆಯನ್ನು ತನ್ನ ರೋಡ್-ರೋಲರ್ ಬಹುಮತದಿಂದ ಮಂಜೂರು ಮಾಡಿಸಿತು. ಇದನ್ನು ವಿರೋಧ ಪಕ್ಷ ಹಿಂದೆಂದೂ ಕಾಣದ ಐಕ್ಯತೆಯಿಂದ ಅಧಿವೇಶನವನ್ನು ಬಹಿಷ್ಕರಿಸುವುದರಿಂದ ಎದುರಿಸಿತು. ಇದಕ್ಕೆ ಸರ್ಕಾರ ಮಣಿಯಬೇಕಾಯಿತು.

ರಾಜ್ಯ ಸಭೆಯಲ್ಲಿ ವಿರೋಧ ಪಕ್ಷಗಳು ಸಿ.ಪಿ.ಐ. (ಎಂ) ಸದಸ್ಯ ದೀಪೇನ್ ಘೋಷ್ ಪ್ರಧಾನ ಮಂತ್ರಿಗಳ ವಿರುದ್ಧ ಸಭೆಯನ್ನು ಬೋಫೋರ್ಸ್ ವಿಷಯ ತಪ್ಪು ಹೇಳಿಕೆ ಮೂಲಕ ದಾರಿ ತಪ್ಪಿಸಿದ ಆಪಾದನೆಯ ಹಕ್ಕು ಚ್ಯುತಿ ಸೂಚನೆಯನ್ನು ಚರ್ಚಿಸುವ ಒತ್ತಾಯದ ಸುತ್ತ ತಮ್ಮ ಬಲ ಹೇರಿದವು. ಇದು ವಿಫಲವಾದಾಗ ವಿರೋಧ ಪಕ್ಷಗಳು ಅಧಿವೇಶನವನ್ನು ಐಕ್ಯತೆಯಿಂದ ಬಹಿಷ್ಕರಿಸಿದವು. ಇದು ಸುಮಾರು 2 ವಾರ ಮುಂದುವರಿಯಿತು.

ಲೋಕಸಭೆಯಲ್ಲಿ ಕೊನೆಗೂ ಸರಕಾರ ತನ್ನ ಜಂಟಿ ಸಮಿತಿ ಸೂಚನೆಯನ್ನು ಮಂಡಿಸಿತು. ಆದರೆ ವಿರೋಧ ಪಕ್ಷದ ಸದಸ್ಯರು ರಭಸದಿಂದ ಅದರ ವಿರುದ್ಧ ಹೋರಾಟ ಮುಂದುವರೆಸಿದರು. ಆಳುವ ಪಕ್ಷದ ಸದಸ್ಯರು ಸಿ.ಐ.ಎ. ಪಿತೂರಿಯ ನೆವದಲ್ಲಿ ಗಮನ ಬೇರೆಡೆಗೆ ಸೆಳೆಯಲು ಪ್ರಯತ್ನಿಸಿದರು. ಸಿ.ಪಿ.ಐ.(ಎಂ) ಮತ್ತಿತರ ವಿರೋಧಿ ಸದಸ್ಯರು ಜಂಟಿ ಸಮಿತಿಯ ಕಾರ್ಯಕ್ಷೇತ್ರವನ್ನು 1980 ರ ನಂತರದ ಎಲ್ಲಾ ರಕ್ಷಣಾ ಆಮದುಗಳಿಗೆ ವಿಸ್ತರಿಸುವ, ಅದನ್ನು ವಿರೋಧ ಪಕ್ಷದ ನಾಯಕನೊಬ್ಬನ ಅಧ್ಯಕ್ಷತೆಯಿಂದ ತಕ್ಕ ವಿರೋಧಿ ಸದಸ್ಯರ ನೇಮಕಾತಿಯಿಂದ ಮತ್ತು ಎಲ್ಲಾ ಅಗತ್ಯವಾದ ಅಧಿಕಾರಕೊಡುವುದರಿಂದ ಬಲಪಡಿಸುವ ಬಗ್ಗೆ ತಮ್ಮ ಹೋರಾಟ ಮುಂದುವರಿಸಿದರು. ಫೇರ್‌ಫ್ಯಾಕ್ಸ್ ಹಗರಣದಲ್ಲಿ ಮಾಡಿದಂತೆ ಕಣ್ಣೊರೆಸುವ ಕಮಿಶನ್ ನೇಮಿಸಿ, ಅದರ ಬಗ್ಗೆ ಮುಂದೆ ಯಾವುದೇ ಚರ್ಚೆಯನ್ನು ನಿಲ್ಲಿಸುವ ದುರುದ್ದೇಶ ಸರಕಾರ ದ್ದೆಂದು ಲೋಕ ಸಭಾಸದಸ್ಯರಾಗಿ ಹಿಂದಿರುಗಿರುವ ಸೋಮನಾಥ್ ಚಟರ್ಜಿ ಆಪಾದಿಸಿದರು. ದೀಪೇನ್ ಘೋಷ್ ಸರ್ಕಾರ ರಕ್ಷಣಾ ಆಮದಿನಲ್ಲಿ ಯಾವುದೇ ಏಜೆಂಟರಿರ ಬಾರದು ಎಂಬ ತನ್ನದೇ ನಿಯಮವನ್ನು ಜಾರಿಯಾಗುವಂತೆ ನೋಡುವ ದಕ್ಷತೆ, ಪ್ರಾಮಾಣಿಕತೆ ಸರ್ಕಾರ ಹೊಂದಿಲ್ಲ. ಭ್ರಷ್ಟಾಚಾರ ತಾಂಡವವಾಡುತ್ತಿರುವ ಇಂತಹ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದೆ. ಮಧ್ಯಂತರ ಚುನಾವಣೆಯೊಂದೇ ಇದಕ್ಕೆ ಪರಿಹಾರ ಎಂದು ಗುಡುಗಿದರು.

ವಿರೋಧ ಪಕ್ಷಗಳು ಮಂಡಿಸಿದ 15 ತಿದ್ದುಪಡಿಗಳಲ್ಲಿ ಒಂದನ್ನೂ ಸ್ವೀಕರಿಸದೆ. ತನ್ನ ರೋಡ್-ರೋಲರ್ ಬಹುಮತದಿಂದ ಆಳುವ ಪಕ್ಷ ತನ್ನ ಸೂಚನೆ ಪಾಸು ಮಾಡಿಸಲು ಸಾಧ್ಯವಾಯಿತು. ಆದರೂ ಇದನ್ನು ಪಾಸು ಮಾಡಿಸಲು ಆಳುವ ಸದಸ್ಯರು

[6ನೇ ಪುಟ ನೋಡಿ]

REG No. BGW-148 MAG (2) PRB DECR 319/-78-79

ಅಪ್ಪಟ ಹೊಣೆಗೇಡಿತನ

[1ನೇ ಪುಟದಿಂದ]

ಅಂದರೆ ವಿ.ಪಿ. ಸಿಂಗ್ ಅರ್ಥ ಸಚಿವರಾಗಿದ್ದ ಎರಡು ವರ್ಷಗಳಲ್ಲಿ ಅವರು ತನ್ನದೇ ಆದ ವೈಯುಕ್ತಿಕ ಧೋರಣೆಗಳನ್ನು ತನಗಿಷ್ಟ ಬಂದ ಹಾಗೆ ಕಾರ್ಯ ರೂಪಕ್ಕೆ ತರುವಷ್ಟು ನಿರಂಕುಶರಾಗಿದ್ದರೆಂದು ನಾವು ನಂಬಬೇಕೆ? ವಿ.ಪಿ ಸಿಂಗ್ ಅವರ ನಾಯಕರಾಗಿದ್ದ ರಾಜೀವಗಾಂಧಿ ಯಾವ ಹಂತದಲ್ಲೂ ಮಧ್ಯ ಪ್ರವೇಶಿಸಿ ಈ ತಪ್ಪು ಧೋರಣೆಗಳನ್ನು ಸರಿಪಡಿಸಲಾಗದಷ್ಟು ನಿಸ್ಸಹಾಯಕರಾಗಿದ್ದರೆ?

ಸಾಂಸದಿಕ ಪ್ರಜಾಸತ್ತೆಯಲ್ಲಿ ಸರ್ಕಾರದ ಧೋರಣೆಗಳನ್ನು ರೂಪಿಸುವುದು ಇಡೀ ಸಂಪುಟದ ಹೊಣೆಗಾರಿಕೆ. ಇದರಲ್ಲಿ ಸಂಪುಟದ ನಾಯಕನಿಗೆ ಮಾತ್ರ ಕೆಲವೊಂದು ವಿಶೇಷ ಅಧಿಕಾರ, ಹಾಗೆಯೇ ಕೆಲವು ಜವಾಬ್ದಾರಿಗಳೂ ಇವೆ. ಪ್ರಧಾನಿಯನ್ನು ಬಿಟ್ಟರೆ ಬೇರೆ ಯಾವನೇ ಮಂತ್ರಿಗೂ ತನ್ನ ಮನಸ್ಸಿಗೆ ಬಂದಂತಹ ಧೋರಣೆಗಳನ್ನು ತನಗೆ ಬೇಕಾದ ಹಾಗೆ ಜಾರಿಗೆ ತರುವ ಸ್ವಾತಂತ್ರ್ಯ ಎಲ್ಲೂ ಇಲ್ಲ. ಸರ್ಕಾರದ ಎಲ್ಲಾ ಪ್ರಮುಖ ಧೋರಣೆಗಳಿಗೂ ಪ್ರಧಾನ ಮಂತ್ರಿಯ ಅಂಗೀಕಾರದ ಮುದ್ರೆ ಬೇಕೇ ಬೇಕು. ಇದು ಸಾಂಸದಿಕ ಪ್ರಜಾಪ್ರಭುತ್ವದಲ್ಲಿನ ಸಾಮೂಹಿಕ ಹೊಣೆಗಾರಿಕೆಯ ಬಗ್ಗೆ ರವಷ್ಟಾದರೂ ತಿಳುವಳಿಕೆ ಇರುವ ಮಂದಿಗೆ ಗೊತ್ತಿರಬೇಕಾದ ವಿಚಾರ.

ಕೇಂದ್ರ ಸರ್ಕಾರ ಹೊಸ ಆರ್ಥಿಕ ನೀತಿಯ ರೂವಾರಿ ಸ್ವತಃ ರಾಜೀವ್ ಗಾಂಧಿಯವರೇ ಎಂದು ಈ ಹಿಂದೆ ಎಲ್ಲರೂ ಘೋಷಿಸುತ್ತಿದ್ದರು. ಎಲ್ಲ ಕಟ್ಟು ಪಾಡುಗಳನ್ನೂ ಸಡಿಲಿಸಿ ಬಿಟ್ಟ ಈ ನೀತಿಯನ್ನು ದೇಶ-ವಿದೇಶದ ಗುತ್ತೇದಾರಿ ಬಂಡವಾಳಗಾರರನ್ನೊಳಗೊಂಡು ಹೊಗಳಿದ್ದೇ ಹೊಗಳಿದ್ದು. ಹೊಸ ಆರ್ಥಿಕ ನೀತಿಯನ್ನು ರಾಜೀವ್ ಗಾಂಧಿ ನಿರೂಪಿಸಿದ್ದು ಮತ್ತು ಅದನ್ನು ದಕ್ಷವಾಗಿ ಅನುಷ್ಠಾನಕ್ಕೆ ತಂದ ಕೀರ್ತಿ ಮಾತ್ರ ವಿಶ್ವನಾಥ ಪ್ರತಾಪ ಸಿಂಗ್ ಅವರದ್ದು ಎಂದೂ ಆಗ ಹೇಳಲಾಗಿತ್ತು. ಆದರೆ ಈಗ ಹೊಸ ಆರ್ಥಿಕ ನೀತಿಯ ಎಲ್ಲ ಅನಿಷ್ಟಕ್ಕೆ ವಿ.ಪಿ.ಸಿಂಗ್ ಅವರೇ ಹೊಣೆಗಾರರೆಂದು ಕಾಂಗ್ರೆಸ್ಸಿನವರು ಹೇಳುತ್ತಿದ್ದಾರೆ. ತೀರಾ ಮೆದುವಾದ ಮಾತಿನಲ್ಲಿ ಹೇಳಬೇಕೆಂದರೆ ಇದ ಹೊಣೆ ಗೇಡಿತನದ ಪರಮಾವಧಿ.

ದೇಶದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅದರಲ್ಲೂ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವು ರಾಜೀವ್ ಗಾಂಧಿ ಹೊಸ ಆರ್ಥಿಕ ನೀತಿಯನ್ನು ಆರಂಭದಿಂದಲೂ ಖಂಡಾ ತುಂಡವಾಗಿ ವಿರೋಧಿಸುತ್ತ ಬಂದಿದೆ. ಇವತ್ತು ಸಮಾಜವಾದಿ ವೇದಿಕೆಯನ್ನು ಸಂಘಟಿಸುತ್ತಿರುವ ಮಂದಿಗೆ ಅಂದು ಹೊಸ ಆರ್ಥಿಕ ನೀತಿಯನ್ನು ಹೊಗಳುವುದು ಬಿಟ್ಟರೆ ಬೇರೆ ಕೆಲಸವೇ ಇದ್ದ ಹಾಗಿರಲಿಲ್ಲ. ಹೊಸ ಆರ್ಥಿಕ ನೀತಿ ದೇಶದ ಅರ್ಥ ವ್ಯವಸ್ಥೆಗೆ ಹೊಸ ಚಾಲನೆ ನೀಡುವುದೆಂದೂ ಇದೇ ಜನ ಅದನ್ನು ಸ್ವಾಗತಿಸಿದ್ದರು. ಅದೇ ಜನ ಇದೀಗ ಏಕಾ ಏಕಿಯಾಗಿ ವಿ.ಪಿ. ಸಿಂಗ್ ಅವರ ನೀತಿ ಸರಕಾರದ ಕೈಗಳನ್ನು ಕಟ್ಟಿಹಾಕಿತೆಂದೂ ಸರ್ಕಾರವು ದೇಶದೊಳಗೆ ದುಬಾರಿ ಬಡ್ಡಿಯ ಸಾಲಕ್ಕೆ ಕೈಯೊಡ್ಡುವಂತೆ ಬಲವಂತ ಪಡಿಸಿತೆಂದೂ ಆಪಾದಿಸುತ್ತಿದ್ದಾರೆ. ಕೊರತೆ ಹಣ ಸೃಷ್ಟಿ, ಭಾರಿ ಪ್ರಮಾಣದ ವಿದೇಶಿ ಸಾಲ ಹಾಗೂ ಇವುಗಳಿಂದಾಗುವ ಸಕಲ ಅನಾಹುತಗಳಿಗೂ ವಿ.ಪಿ. ಸಿಂಗ್ ಅವರ ಆರ್ಥಿಕ ನೀತಿಯೇ ಕಾರಣವಂತೆ! ಹೊಸ ಆರ್ಥಿಕ ನೀತಿ ಜಾರಿಗೆ ಬಂದಾಗ ಅದು ನಮ್ಮ ದೇಶವನ್ನು 'ವಿದೇಶೀ ಸಾಲದ ಬೋನಿನೊಳಗೆ ತಳ್ಳಿಬಿಡುವುದೆಂದು' ನಾವು ಎಚ್ಚರಿಕೆ ಕೊಟ್ಟಿದೆವು. ಆದರೆ ಆಗ ನಮ್ಮ ಮಾತಿಗೆ ಕಿವಿಗೊಡದೆ 'ಹೊಸ ಆರ್ಥಿಕ ನೀತಿ' ರಾಜೀವ್ ಗಾಂಧಿಯವರ ಅಮೋಘ ಕಲ್ಪನೆಯ ಕೂಸೆಂದು ಅದನ್ನು ಮುದ್ದು ಮಾಡುವುದರಲ್ಲೇ ನಿರತರಾಗಿದ್ದ ಈ ಮಂದಿ ಇದೀಗ 'ಹೊಸ ಆರ್ಥಿಕ ನೀತಿ ನಮ್ಮ ದೇಶವನ್ನು ವಿದೇಶಿ ಸಾಲದ ಬೋನಿನೊಳಗೆ ನೂಕಿದೆ' ಎನ್ನಲಾರಂಭಿಸಿದ್ದಾರೆ! ಇಂದೆತಹ ತಿಪ್ಪರಲಾಗ ಮಾರಾಯರೆ?

ರಾಜೀವ್ ಗಾಂಧಿಯವರಾಗಲೀ ಅಥವಾ ಸಮಾಜವಾದಿ ವೇದಿಕೆಯಲ್ಲಿನ ಅವರ ಗೆಳೆಯರಿಗಾಗಲೀ ತಾವಾಡುತ್ತಿರುವ ಮಾತುಗಳ ಬಗ್ಗೆ ಏನಾದರೂ ಪ್ರಾಮಾಣಿಕತೆಯಿದ್ದರೆ ಅವರು ವಿ.ಪಿ. ಸಿಂಗ್ ಅವರು ಮಾಡಿರುವ ಅನಾಹುತವೆಂದು ಏನನ್ನು ಕರೆಯುತ್ತಿದ್ದಾರೋ ಅದಕ್ಕೆಲ್ಲ ತಾವೇ ಹೊಣೆಗಾರರೆಂಬುದನ್ನು ಒಪ್ಪಿಕೊಳ್ಳಲಿ. ವಿ.ಪಿ.ಸಿಂಗ್ ಒಬ್ಬರೇ ಕಾಂಗ್ರೆಸ್‌ನ ಹಣಕಾಸು ನೀತಿಯ ಸೃಷ್ಟಿ ಕರ್ತ ಅಲ್ಲ; ಅವರು ಅದರ ದಕ್ಷ ಅನುಷ್ಠಾನ ಕರ್ತ ಅಷ್ಟೆ. ಮತ್ತು ಈ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ವಿರೋಧಿಸುತ್ತಿರುವುದೂ ಈ ಧೋರಣೆಗಳನ್ನೇ.

ಜೆ. ಎಚ್. ಪಟೇಲರೂ, ರೋಗಗ್ರಸ್ತ ಕಾರ್ಖಾನೆಗಳೂ

[1ನೇ ಪುಟದಿಂದ]

ನಿರ್ವಹಣೆಗೆ ಅವಲಂಬಿಸಿದ್ದ ಮೈಸೂರಿನ ಕೃಷ್ಣರಾಜೇಂದ್ರ ಹತ್ತಿಗಿರಣಿ ಮುಚ್ಚಿ ಮೂರು ವರ್ಷಗಳಾದವು ಬೆಂಗಳೂರಿನ ಪೂರ್ವದಲ್ಲಿರುವ ಅಲೆಂಬಿಕ್ ಗಾಜಿನ ಕಾರ್ಖಾನೆ ಗೌರಿಬಿದನೂರು ಸಕ್ಕರೆ ಕಾರ್ಖಾನೆ ಸೇರಿದಂತೆ ಕೆಲವು ಸಕ್ಕರೆ ಕಾರ್ಖಾನೆಗಳು ಮುಚ್ಚಿವೆ. ಇವುಗಳಲ್ಲಿ ದುಡಿದು ಬದುಕುತ್ತಿದ್ದ ಎಷ್ಟು ಸಹಸ್ರ ಕಾರ್ಮಿಕರು ಎಷ್ಟು ಸಹಸ್ರ ಕುಟುಂಬಗಳು ಬೀದಿ ಪಾಲಾಗಿವೆ ಎಂಬುದರ ಪರಿವೆ ಶ್ರೀ ಜೆ.ಎಚ್. ಪಟೇಲರಿಗಿದೆಯೇ? ಅವರ ಸಾಲಿಗೆ ಇನ್ನಷ್ಟು ಸಹಸ್ರ ಕುಟುಂಬಗಳನ್ನು ದೂಡುವ ಹಂಚಿಕೆಗೆ ಶ್ರೀ ಜೆ. ಎಚ್. ಪಟೇಲರು ಪಾಮೀಲೇ?

ಕೈಗಾರಿಕೆಗಳು ರೋಗಗ್ರಸ್ತವಾಗುವುದಕ್ಕೆ ಕೈಗಾರಿಕಾ ವಿವಾದಗಳೇ (ಕಾರ್ಮಿಕರೇ) ಕಾರಣವೆಂದು ಬಂಡವಾಳಗಾರರ ಏಜೆಂಟರು ಬೊಬ್ಬೆ ಹೊಡೆಯುತ್ತಾರೆಂಬುದು ನಿಜ. ರೋಗಗ್ರಸ್ತ ಕೈಗಾರಿಕೆಗಳ ಬಗ್ಗೆ ಅಧ್ಯಯನವನ್ನು ನಡೆಸಿದ ರಿಸರ್ವ್ ಬ್ಯಾಂಕ್ ಕೈಗಾರಿಕಾ ವಿವಾದಗಳ ಸಮಸ್ಯೆಯಿಂದಾಗಿ ಕೈಗಾರಿಕಾ ಘಟಕಗಳು ಮುಚ್ಚಿರುವುದು ಶೇಕಡ 2 ಮಾತ್ರ ಎಂದು ಹೇಳಿದೆ. ಶೇ.53ರಷ್ಟು ಕೈಗಾರಿಕೆಗಳ ದುರವಸ್ಥೆಗೆ ಹಣವನ್ನು ಬೇರೆಡೆಗೆ ವರ್ಗಾಯಿಸುವುದೂ ಸೇರಿದಂತೆ ದುರಾಡಳಿತ, ಆಂತರಿಕ ಜಗಳ ಮತ್ತು ಸೂಕ್ತ ಮಾರುಕಟ್ಟೆಯ ಯೋಜನೆಯಿಲ್ಲದಿರುವುದು ಕಾರಣವಾದ ಶೇ14ಕ್ಕೆ ದೋಷ ಪೂರ್ಣ ಪ್ರಾರಂಭಿಕ ಯೋಜನೆ ಮತ್ತಿತರ ತಾಂತ್ರಿಕ ಕೊರತೆಗಳು ಕಾರಣವಾಗಿವೆಯೆಂದು, ಶೇ.9 ಘಟಕಗಳು ವಿದ್ಯುಚ್ಛಕ್ತಿಯ ಕಡಿತ ಮತ್ತು ಕಚ್ಚಾವಸ್ತುಗಳ ಅಭಾವದಿಂದಾಗಿ ರೋಗಗ್ರಸ್ತವಾಗಿದೆಯೆಂದು ರಿಸರ್ವ್‌ಬ್ಯಾಂಕ್ ಅಧ್ಯಯನವು ತಿಳಿಸಿದೆ. ಇನ್ನು ಶೇ. 23 ಘಟಕಗಳು ಮಾರುಕಟ್ಟೆಯಲ್ಲಿನ ಹಿಂಜರಿತದಿಂದಾಗಿ ಮುಚ್ಚಿವೆಯೆಂದು ಅಧ್ಯಯನವು ಹೇಳಿದೆ. ಈ ವಿಭಾಗದಲ್ಲಿ ಬರುವ ಬಹುತೇಕ ಘಟಕಗಳು ಎಂಜಿನಿಯರಿಂಗ್, ಹತ್ತಿ, ಮತ್ತು ಸೆಣಬು, ಬಟ್ಟೆ ಗಿರಣಿ ಮತ್ತು ಸಕ್ಕರೆ ಕೈಗಾರಿಕೆಗಳಾಗಿವೆ. ಈ ದುರವಸ್ಥೆಗೆ ಆಡಳಿತಮಂಡಳಿಗಳೇ, ಎಂದರೆ ಬಂಡವಾಳಗಾರರೇ ಕಾರಣವೆಂದು ಅಧ್ಯಯನವು ನಿಚ್ಚಳವಾಗಿ ತಿಳಿಸಿದೆ.

ಮೇಲಿನ ವಿಷಯಗಳ ಅರಿವು ಶ್ರೀ ಪಟೇಲರಿಗೆ ಇಲ್ಲವೇ? ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಅವರಿಗೆ ಒಬ್ಬ ಗೆಜೆಟೆಡ್ ದರ್ಜೆಯ ಆಪ್ತ ಕಾರ್ಯದರ್ಶಿ ಇದ್ದಾರೆ. ಕೈಗಾರಿಕಾ ಇಲಾಖೆಗೆ ಒಬ್ಬ ಐ.ಎ.ಎಸ್. ದರ್ಜೆಯ ಕಾರ್ಯದರ್ಶಿ, ಅದೇ ದರ್ಜೆಯ ಆಯುಕ್ತರಿದ್ದಾರೆ. ಜಂಟಿ ಕಾರ್ಯದರ್ಶಿಗಳು, ಡೆಪ್ಯುಟಿ ಕಾರ್ಯದರ್ಶಿಗಳು ಅಂಡರ್ ಕಾರ್ಯದರ್ಶಿಗಳು, ಸಾಕು ಬೇಕಾದಷ್ಟು ಸಿಬ್ಬಂದಿ ಇದ್ದಾರೆ. ಇವರುಗಳು ಶ್ರೀ ಪಟೇಲರಿಗೆ ರಿಸರ್ವ್ ಬ್ಯಾಂಕ್ ಅಧ್ಯಯನದ ವಿಷಯಗಳನ್ನು ತಿಳಿಸಿಲ್ಲವೆಂದು ಹೇಳಲಾಗುತ್ತದೆಯೆ? ತಿಳಿಸಿದ್ದರೂ ಅದು ಈ ಸಚಿವರ ತಲೆಗೆ ಹೋಗಲಿಲ್ಲವೇ? ಅಥವಾ ವಿಧಾನಸಭೆಯಲ್ಲಿ ಮಾತನಾಡುವಾಗ ತಲೆಗೆ ಹೊಳೆಯಲಿಲ್ಲವೆ

ಸರ್ಕಾರವು ರೋಗಗ್ರಸ್ತ ಕೈಗಾರಿಕೆಗಳ ಗ್ಯಾರೇಜಲ್ಲವೆಂದು ಪ್ರಧಾನಮಂತ್ರಿ ರಾಜೀವಗಾಂಧಿಯವರು ಹೇಳಿದ್ದಾರೆಂದು ತಮ್ಮನ್ನು ಸಮರ್ಥಿಸಿಕೊಳ್ಳಲು ಶ್ರೀ ಪಟೇಲರು ನುಡಿದಿದ್ದಾರೆ. ಕಾಂಗ್ರೆಸ್(ಐ) ಮತ್ತು ಜನತಾ ಪಕ್ಷಗಳು ಒಂದೇ ವರ್ಗಗಳ ಹಿತಗಳನ್ನು ಬಂಡವಾಳಗಾರರ, ಜಮೀನ್ದಾರ ವರ್ಗಗಳಹಿತಗಳದ್ದು ಪ್ರತಿನಿಧಿಸುತ್ತದೆಂದು ಸಿ.ಪಿ.ಐ.[ಎಂ] ಹೇಳುವುದು ಎಷ್ಟು ಸತ್ಯ ಎಂಬುದು ಇದರಲ್ಲಿ ಗೊತ್ತಾಗುತ್ತದೆ. ಬಡತನದ ರೇಖೆಯ ಕೆಳಗೆ ಬದುಕುತ್ತಿರುವ, ಎಂದರೆ ಮೂರು ಹೊತ್ತು ಹೊಟ್ಟೆ ತುಂಬ ಊಟ ಮಾಡಲು ಸಾಧ್ಯವಿಲ್ಲದಿರುವ ಭಾರತದ ಐವತ್ತು ಕೋಟಿಗಿಂತಲೂ ಹೆಚ್ಚು ಪ್ರಜೆಗಳ ದೈನಂದಿನ ಸಂಕಷ್ಟಗಳ ಬಗ್ಗೆ, ಹತ್ತು ಕೋಟಿಗಿಂತಲೂ ಹೆಚ್ಚಿಗಿರುವ ನಿರುದ್ಯೋಗಿಗಳ ಬಗ್ಗೆ ರಾಜೀವಗಾಂಧಿಯವರಿಗೆ ಮತ್ತು ಪಟೇಲರಿಗೆ ಏನು ಕಾಳಜಿ ಇರಹುದು?

ಶ್ರೀ ಪಟೇಲರು ತಮ್ಮನ್ನು ಸಮರ್ಥಿಸಿಕೊಳ್ಳಲು ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮಿಖಾಯೆಲ್ ಗೋರ್ಬಚೇವ್‌ರ ಹೆಸರನ್ನು ಉಪಯೋಗಿಸಿಕೊಂಡಿರುವುದಲ್ಲದೆ ಇದು ಮಾಸ್ಕೋ ಅಥವಾ ಚೀನ ಎನ್ನುವ ಅಧಿಕಪ್ರಸಂಗಕ್ಕೂ ಇಳಿದಿದ್ದಾರೆ. ಸೋವಿಯೆತ್ ಒಕ್ಕೂಟ ಮತ್ತು ಚೀನಗಳ ಪ್ರಸ್ತಾಪ ಮಾಡುವ ನೈತಿಕ ಹಕ್ಕು ಶ್ರೀಪಟೇಲರಿಗಿದೆಯೇ? ಸೋವಿಯೆತ್ ಒಕ್ಕೂಟ ಚೀನಗಳು ಸಮಾಜವಾದಿ ದೇಶಗಳಾಗಿದ್ದು, ಆ ದೇಶಗಳಲ್ಲಿ ಉತ್ಪಾದನೆ, ವಿತರಣೆ, ವಿನಿಮಯ ಖಾಸಗಿ ಒಡೆತನದಲ್ಲಿಲ್ಲದೇ ಸಾಮಾಜಿಕವಾಗಿರುವುದು ಶ್ರೀ ಪಟೇಲರಿಗೆ ಗೊತ್ತಿಲ್ಲವೆಂದು ಹೇಳಲಾಗುತ್ತದೆಯೇ?

ಕಾರ್ಖಾನೆಗಳನ್ನು ರೋಗಗ್ರಸ್ತ ಮಾಡಿದವರ ಆರೋಗ್ಯ ಚೆನ್ನಾಗಿದ್ದು ಒಂದು ರಾಜ್ಯದಲ್ಲಿ ಕಾರ್ಖಾನೆಯನ್ನು ಮುಚ್ಚಿ ಇನ್ನೊಂದು ರಾಜ್ಯದಲ್ಲಿ ಕೈಗಾರಿಕೆ ತೆರೆಯುತ್ತಾರೆಂದು ಶ್ರೀ ಪಟೇಲರು ಮರು ದಿವಸ ಎಂದರೆ ಸೆಪ್ಟೆಂಬರ್ 5 ರಂದು ಚಾರ್ಟರ್ಡ್ ಅಕೌಂಟೆಂಟರ ಸಮ್ಮೇಳನದಲ್ಲಿ ಹೇಳಿದ್ದಾರೆ. ಅಂತಹ ದರೋಡೆಕೋರರನ್ನು ಶಿಕ್ಷಿಸಲು ಶ್ರೀ ಪಟೇಲರು ಏನುಮಾಡಿದ್ದಾರೆ.? ತಾನು ಪೋಲೀಸು ಮಂತ್ರಿ ಅಲ್ಲ ಎಂದು ಹೇಳುತ್ತಾರೆಯೇ? ಪೋಲೀಸು ಮಂತ್ರಿ ಜಾಸಪ್ಪನವರಿಗೆ ಹೇಳಿ ಶಿಕ್ಷಿಸಬಹುದಲ್ಲವೇ ಚುನಾವಣೆಬಂದರೆ ಇದೇ ದರೋಡೆಕೋರರ ಬಳಿ ಹೋಗುವ ಇದೇ ದರೋಡೆಕೋರರ ಹಿತಗಳನ್ನು ರಕ್ಷಿಸುವ ಈ ಸಚಿವರುಗಳು ಅವರ ಮೇಲೆ ಕ್ರಮ ಜರುಗಿಸುತ್ತಾರೆಯೇ?

ಕೈಗಾರಿಕೆಗಳು ರೋಗಗ್ರಸ್ತವಾಗುವ ಬಗ್ಗೆ ಜನರು ಜಾಗೃತರಾಗಬೇಕು. ಮುಚ್ಚಿರುವ ಕಾರ್ಖಾನೆಗಳನ್ನು ತೆರೆಸಲು ಕಾರ್ಮಿಕರು, ದುಡಿಯುವ ಜನರು ಐಕ್ಯ ಚಳುವಳಿಯನ್ನು ನಡೆಸಬೇಕೇ ಹೊರತು, ರಾಜೀವಗಾಂಧಿ ಪಟೇಲರುಗಳನ್ನು ನಂಬಿಕೊಂಡಿರುವುದರಿಂದ ಫಲವಿಲ್ಲ.

ಸಿ.ಪಿ.ಐ.(ಎಂ), ಜನತಾ ಒಕ್ಕೂಟಕ್ಕೆ ಕುಂದಲ ಗುರ್ಕಿ ಮಂಡಲ

ಶಿಡ್ಲಘಟ್ಟ ತಾಲ್ಲೋಕು ಕುಂದಲ ಗುರ್ಕಿ ಮಂಡಲ ಪಂಚಾಯಿತಿ ಪ್ರಧಾನ ಮತ್ತು ಉಪ ಪ್ರಧಾನ ಚುನಾವಣೆ ಸೆಪ್ಟೆಂಬರ್ 3 ದಂದು ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆದು ಸಿ.ಪಿ.ಐ (ಎಂ) ಕೋಲಾರ ಜಿಲ್ಲಾ ಕಾರ್ಯದರ್ಶಿ ಕಾ|ಕೆ.ಎಂ. ವೆಂಕಟೇಶ್‌ರವರು ಪ್ರಧಾನರಾಗಿ, ಜನತಾದ ಶ್ರೀ.ಎನ್.ರಾಮನ್ ಉಪ ಪ್ರಧಾನರಾಗಿ ಆಯ್ಕೆ ಆಗಿರುತ್ತಾರೆ.

ಡಿ. ವೈ. ಎಫ್. ಐ. ಸಮಾವೇಶ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಉಡುಪಿ ತಾಲ್ಲೋಕು ಸಮಾವೇಶ ಉಡುಪಿಯಲ್ಲಿ ಜರುಗಿತು. ಕಾರ್ಮಿಕ ನಾಯಕ ಡೇವಿಡ್ ಕರ್ಕಡ ಹಾಗೂ ಎಸ್. ಎಫ್. ಐ. ಜಿಲ್ಲಾ ಸಮಿತಿ ಸದಸ್ಯ ಕಾ|| ಜಯಚಂದ್ರನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಚಾಲಕ ರಮೇಶ್ ಮೆಂಡನ್ ಮಂಡಿಸಿದ ವರದಿ ಅಂಗೀಕೃತಗೊಂಡಿತು. ನೂತನ ತಾಲ್ಲೋಕು ಸಮಿತಿಗೆ ಕಾ| ಕೃಷ್ಣ ಎಸ್. ಅಮೀನ್ (ಅಧ್ಯಕ್ಷ), ಪಿ.ವಿಶ್ವನಾಥರೈ, ಕೆ.ರತ್ನಾಕರ (ಉಪಾಧ್ಯಕ್ಷರು) ರಮೇಶ್‌ಮೆಂಡನ್ (ಕಾರ್ಯದರ್ಶಿ) ಬಾಬು, ವಿಜಯಕುಮಾರ್ (ಜೊತೆ ಕಾರ್ಯದರ್ಶಿಗಳು) ಡಿ.ವಿಶ್ವನಾಥ ಖಜಾಂಚಿಯಾಗಿ ಆಯ್ಕೆಗೊಂಡರು.

ಅಳವಂಡಿ ಬಂದ್

ಬೋಚನಹಳ್ಳಿ ಗ್ರಾಮದ ರೈತ ಯಂಕಪ್ಪನಿಂದ ನಾಲ್ಕು ಎಕರೆ ಭೂಮಿಯನ್ನು ಅಧಿಕಾರಿಗಳು ಲಂಚ ಪಡೆದು ಮತ್ತೊಬ್ಬನಿಗೆ ಅಕ್ರಮವಾಗಿ ನೀಡಿದ್ದನ್ನು ಖಂಡಿಸಿ ಸೆಪ್ಟೆಂಬರ್ 4 ರಂದು ಎಸ್.ಎಫ್.ಐ. ಅಳವಂಡಿ ಬಂದ್ ಆಚರಿಸಿತು. ವೆಂಕಪ್ಪನ ಹೆಸರಿನಲ್ಲಿ 1961ರಲ್ಲೇ ಹಕ್ಕು ಪತ್ರ ಎಲ್ಲಾ ದಾಖಲೆಗಳು ಇರುವುದರಿಂದ ಆಸ್ತಿಯನ್ನು ವೆಂಕಪ್ಪನಿಗೆ ಒದಗಿಸಲು ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾ.ಎನ್.ರಾಮನಗೌಡ, ಕಾ. ಈಶಪ್ಪ ಹಕ್ಕಂಡಿ ಒತ್ತಾಯಿಸಿದರು.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N. K. Upadhyaya